ಸಂಪುಟ 01 | ಸಂಚಿಕೆ 208 | ಬುಧವಾರ 24 ಜೂನ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) ಅಂತರರಾಷ್ಟ್ರೀಯ ಕಾಲ್ಪನಿಕ ದಿನ (International Fairy Day): ಕಲ್ಪನಾ ಲೋಕದ ಕಾಲ್ಪನಿಕ ಜೀವಿಗಳು ಮತ್ತು ಕಾಲ್ಪನಿಕ ಕಥೆಗಳಿಗಾಗಿ ಮುಡಿಪಾಗಿಟ್ಟ ದಿನ.

2) ಸೇಂಟ್ ಜಾನ್ಸ್ ಡೇ (St. John's Day) ಅಥವಾ ಮಿಡ್ಸಮ್ಮರ್ (Midsummer): ಬೇಸಿಗೆಯ ಆರಂಭವನ್ನು ಸಂಭ್ರಮಿಸುವ ಯುರೋಪಿಯನ್ ಸಂಪ್ರದಾಯದ ಪ್ರಮುಖ ಹಬ್ಬ.

3) ಕ್ಯಾಬೊಕ್ಲೋ ದಿನ (Caboclo Day): ಬ್ರೆಜಿಲ್‌ನ ಅಮೆಜಾನಾಸ್ ಪ್ರದೇಶದಲ್ಲಿ ಸ್ಥಳೀಯ ಸಂಸ್ಕೃತಿಯನ್ನು ಗೌರವಿಸುವ ವಿಶೇಷ ಆಚರಣೆ.

## ಸುಭಾಷಿತ

ನಿಮ್ಮ ಬದುಕನ್ನು ಗೌರವಯುತವಾಗಿ ನಡೆಸಬೇಕೆಂಬ ಹಂಬಲವಿದ್ದರೆ, ಸ್ವಾವಲಂಬನೆಯೇ ಅತ್ಯುತ್ತಮ ಮಾರ್ಗ ಎಂದು ನಂಬಿರಿ".

ಡಾ॥ ಬಿ ಆರ್ ಅಂಬೇಡ್ಕರ್

## ಆರ್ಡಿಪಿಆರ್ ಇಲಾಖೆಯ ಎಇಇ ತಿಪ್ಪೇಸ್ವಾಮಿ ಮನೆ ಮೇಲೆ ಲೋಕಾಯುಕ್ತ ದಾಳಿ

❑ ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ: ಲೋಕಾಯುಕ್ತ ಅಧಿಕಾರಿಗಳು ಇಂದು ಬೆಳ್ಳಂಬೆಳಿಗ್ಗೆ ಕಾರ್ಯಾಚರಣೆಗೆ ಇಳಿದಿದ್ದು, ಆದಾಯ ಮೀರಿ ಅಕ್ರಮ ಆಸ್ತಿ ಸಂಪಾದನೆ ಆರೋಪದಮೇರೆಗೆಬಳ್ಳಾರಿಜಿಲ್ಲೆಯಸಿರುಗುಪ್ಪದಆರ್ಡಿಪಿಆರ್ಇಲಾಖೆಯ ಎಇಇ ತಿಪ್ಪೇಸ್ವಾಮಿ ಮನೆ ಮೇಲೆ ದಾಳಿ ಮಾಡಿ, ಪರಿಶೀಲನೆ ನಡೆಸಿದ್ದಾರೆ.**



ಸಿರುಗುಪ್ಪ ಕಚೇರಿ ಮತ್ತು ಎಇಇ ತಿಪ್ಪೇಸ್ವಾಮಿಯ ಬಳ್ಳಾರಿಯ ಹನುಮಾನ್ ನಗರದ ಮನೆ ಮತ್ತು ಕುಡುತಿನಿ ಪಟ್ಟಣದ ನಿವಾಸ ಸೇರಿ ಮೂರು ಕಡೆ ಏಕಾಕಾಲಕ್ಕೆ ಲೋಕಾಯುಕ್ತರು ದಾಳಿ ಮಾಡಿದ್ದಾರೆ. ಲೋಕಾಯುಕ್ತ ಎಸ್‌ಪಿ ವಾಸುದೇವ ಅವರ ನೇತೃತ್ವದಲ್ಲಿ ದಾಳಿಗೆ ಸಜ್ಜಾಗಿದ್ದ ಪ್ರತ್ಯೇಕ ಮೂರು ತಂಡಗಳು ಇಂದು ಬೆಳಿಗ್ಗೆ ಕಾರ್ಯಾಚರಣೆ ಮಾಡಿ, ದಾಖಲೆಗಳನ್ನು ಪರಿಶೀಲನೆ ನಡೆಸಿದ್ದಾರೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಆ.31 ರೊಳಗೆ ಪಂಚ ಪಾಲಿಕೆಗಳಿಗೆ ಚುನಾವಣೆ : ಜುಲೈ 2ನೇ ವಾರದಲ್ಲಿ ಅಧಿಸೂಚನೆ ಸಾಧ್ಯತೆ

❑ ನೈಜ್ಯ ದೆಸೆ ನ್ಯೂಸ್

**ಬೆಂಗಳೂರು; ಅಂತೂ ಇಂತೂ ಸುಪ್ರೀಂ ಕೋರ್ಟ್ ಆದೇಶದಂತೆ ಆ.31 ರೊಳಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯ ಐದು ನಗರಪಾಲಿಕೆಗಳಿಗೆ ಚುನಾವಣೆ ನಡೆಯುವುದು ಖಚಿತಪಟ್ಟಿದೆ.**

ಆ.31ರೊಳಗೆ ಚುನಾವಣೆ ನಡೆಸುವ ಸಂಬಂಧ ಈಗಾಗಲೇ ಮೂರು ಸಭೆಗಳನ್ನು ನಡೆಸಿರುವ ರಾಜ್ಯ ಚುನಾವಣಾ ಆಯೋಗ ಜುಲೈ ಮೊದಲ ಅಥವಾ ಎರಡನೇ ವಾರದಲ್ಲಿ ಚುನಾವಣಾ ವೇಳಾಪಟ್ಟಿ ಪ್ರಕಟಿಸಿ, ಆಗಸ್ಟ್ ಮೂರನೇ ವಾರದಲ್ಲಿ ಮತದಾನ ನಡೆಸಲು ಸಿದ್ಧತೆ ಮಾಡಿಕೊಂಡಿದೆ. ಜುಲೈ 10ರೊಳಗೆ ಚುನಾವಣಾ ದಿನಾಂಕ ಪ್ರಕಟಗೊಳ್ಳುವ ಸಾಧ್ಯತೆ ಇದ್ದು, ವೇಳಾಪಟ್ಟಿ ಪ್ರಕಟವಾದ ತಕ್ಷಣವೇ ಬೆಂಗಳೂರು ನಗರದಲ್ಲಿ ಮಾದರಿ ನೀತಿ ಸಂಹಿತೆ ಜಾರಿಗೆ ಬರಲಿದೆ ಎಂದು ಚುನಾವಣಾ ಆಯೋಗದ ಮೂಲಗಳು ತಿಳಿಸಿವೆ. ಜಿಬಿಎ ವ್ಯಾಪ್ತಿಯ ಐದು ನಗರಪಾಲಿಕೆಗಳಿಗೆ ಚುನಾವಣೆ ನಡೆಸಲು ನೀಡಿದ್ದ ಜೂನ್ 30ರ ಗಡುವನ್ನು ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ ಹಾಗೂ ಸಿಬ್ಬಂದಿ ಕೊರತೆಯನ್ನು ಪರಿಗಣಿಸಿ ಸುಪ್ರೀಂ ಕೋರ್ಟ್ ಆಗಸ್ಟ್ 31ರವರೆಗೆ ವಿಸ್ತರಿಸಿತ್ತು. ಮಾತ್ರವಲ್ಲ ಮತ್ತೊಮ್ಮೆ ಚುನಾವಣೆ ಮುಂದೂಡುವ ವಿಚಾರವನ್ನು ನಮ ಬಳಿಗೆ ತರಬಾರದು ಎಂದು ಬಿಸಿ ಮುಟ್ಟಿಸಿತ್ತು. ರಾಜ್ಯ ಸರ್ಕಾರ ಸೆಪ್ಟೆಂಬರ್ ಅಂತ್ಯದವರೆಗೆ




ಕಾಲಾವಕಾಶ ಕೋರಿ ಮನವಿ ಸಲ್ಲಿಸಿದ್ದರೂ, ನ್ಯಾಯಾಲಯ ಅದನ್ನು ತಿರಸ್ಕರಿಸಿದೆ.

ಚುನಾವಣಾ ಆಯೋಗದ ಸದ್ದಿಲ್ಲದ ಸಿದ್ಧತೆ:ಸುಪ್ರೀಂ ಕೋರ್ಟ್ ಆದೇಶದ ನಂತರ ರಾಜ್ಯ ಚುನಾವಣಾ ಆಯೋಗ ಸದ್ದಿಲ್ಲದೆ ಚುನಾವಣಾ ಸಿದ್ಧತೆ ಆರಂಭಿಸಿದೆ. ಮತದಾರರ ಪಟ್ಟಿ ಅಂತಿಮಗೊಳಿಸುವುದು, ಮತಗಟ್ಟೆಗಳ ವ್ಯವಸ್ಥೆ, ಸಿಬ್ಬಂದಿ ನಿಯೋಜನೆ ಸೇರಿದಂತೆ ವಿವಿಧ ಹಂತದ ಸಿದ್ಧತೆಗಳು ನಡೆಯುತ್ತಿವೆ. ಜುಲೈ ಮೊದಲ ಅಥವಾ ಎರಡನೇ ವಾರದಲ್ಲಿ ಸುದ್ದಿಗೋಷ್ಠಿ ನಡೆಸಿ ಚುನಾವಣಾ ವೇಳಾಪಟ್ಟಿ ಪ್ರಕಟಿಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಕಾಂಗ್ರೆಸ್‌ನಲ್ಲೂ ಚುನಾವಣಾ ಚಟುವಟಿಕೆ; ಇತ್ತ ಆಡಳಿತಾರೂಢ ಕಾಂಗ್ರೆಸ್ ಕೂಡ ಚುನಾವಣೆಗೆ ಸಜ್ಜಾಗಿದ್ದು, ಐದು ನಗರಪಾಲಿಕೆಗಳ ವ್ಯಾಪ್ತಿಯ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರಿಗೆ ಈಗಾಗಲೇ ಸಿದ್ಧತೆ ಆರಂಭಿಸುವಂತೆ ಸೂಚನೆ ನೀಡಿದೆ.

ಮನೆ ಮನೆಗೆ ಭೇಟಿ ನೀಡಿ ರಾಜ್ಯ ಸರ್ಕಾರದ ಸಾಧನೆಗಳು ಹಾಗೂ ಗ್ಯಾರಂಟಿ ಯೋಜನೆಗಳ ಕುರಿತು ಮತದಾರರಿಗೆ ಮನವರಿಕೆ ಮಾಡಬೇಕು. ವಾರ್ಡ್‌ವಾರು ಮತದಾರರ ಪಟ್ಟಿಯನ್ನು ಪರಿಶೀಲಿಸಿ ಮಾಹಿತಿ ಸಂಗ್ರಹಿಸಬೇಕು. ಅಲ್ಲದೆ, ವಾರ್ಡ್ ಮಟ್ಟದಲ್ಲಿ ಜನಸಂಪರ್ಕ ಕಾರ್ಯಕ್ರಮಗಳನ್ನು ತ್ವರಿತವಾಗಿ ಆಯೋಜಿಸುವಂತೆ ಪಕ್ಷದ ನಾಯಕರು ಸೂಚಿಸಿದ್ದಾರೆ ಎಂಬ ಮಾಹಿತಿ ಪಕ್ಷದ ಹಿರಿಯ ಮುಖಂಡರಿಂದ ಲಭ್ಯವಾಗಿದೆ.

ಬಿಜೆಪಿ ಕೂಡ ಸಿದ್ಧ; ಕಳೆದ ಆರು ವರ್ಷಗಳಿಂದ ಜಿಬಿಎಗೆ ಚುನಾವಣೆ ನಡೆಯದಿರುವುದರಿಂದ ಅಭಿವೃದ್ಧಿ ಕಾರ್ಯಗಳು ಕುಂಠಿತಗೊಂಡಿವೆ. ಆದಷ್ಟು ಬೇಗ ಪಂಚ ಪಾಲಿಕೆಗಳಿಗೆ ಚುನಾವಣೆ ನಡೆದರೆ ಹಲವಾರು ಅಭಿವೃದ್ಧಿ ಕಾರ್ಯ ಮಾಡಲು ಸಹಕಾರಿಯಾಗುತ್ತದೆ ಎಂದು ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ಅವರು ಬಿಜೆಪಿ ಕೂಡ ಚುನಾವಣೆಗೆ ಸಿದ್ಧತೆ ನಡೆಸಿದೆ ಎಂದು ನಿನ್ನೆ ಪರೋಕ್ಷವಾಗಿ ಹೇಳಿದ್ದರು. ಇದರ ಜೊತೆಗೆ ಪಕ್ಷದ ಇತರ ನಾಯಕರುಗಳು ಜಿಬಿಎ ಚುನಾವಣೆ ಎದುರಿಸಲು ಸಜ್ಜಾಗಿದ್ದಾರೆ.

ಜೆಡಿಎಸ್ ಹುಮಸ್ಸು; ಇದುವರೆಗೂ ಬಿಬಿಎಂಪಿ ವ್ಯಾಪ್ತಿಯಲ್ಲಿ ಅಂತಹ ಸಾಧನೆ ಮಾಡದ ಜೆಡಿಎಸ್‌ನವರು ಈ ಬಾರಿ ಬಿಜೆಪಿ ಮೈತ್ರಿಯೊಂದಿಗೆ ಪಂಚ ಪಾಲಿಕೆ ಚುನಾವಣೆ ಎದುರಿಸಲು ಸಜ್ಜಾಗಿದ್ದಾರೆ. ಈ ಬಾರಿ ನಮ ಪಾಲಿಗೆ ಸಿಗುವ ಕ್ಷೇತ್ರಗಳನ್ನು ನಿರಾಯಾಸವಾಗಿ ಗೆಲ್ಲುತ್ತೇವೆ ಎಂಬ ಹುಮಸ್ಸಿನಲ್ಲಿದ್ದಾರೆ ಆ ಪಕ್ಷದವರು.

## ಕೆಂಪೇಗೌಡ ಜಯಂತಿ ಆಚರಣೆಗೆ ಅಗತ್ಯ ಸಿದ್ಧತೆಗೆ ಅಪರ ಜಿಲ್ಲಾಧಿಕಾರಿ ಶಿವಾನಂದ ಸೂಚನೆ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು ಜೂನ್ 23 (ಕರ್ನಾಟಕ ವಾರ್ತೆ): ರಾಯಚೂರು ಜಿಲ್ಲಾಡಳಿತದಿಂದ ಕೆಂಪೇಗೌಡ ಜಯಂತಿ ಕಾರ್ಯಕ್ರಮ ಆಚರಣೆ ಸಂಬಂಧ ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಅವರ ಅಧ್ಯಕ್ಷತೆಯಲ್ಲಿ ಜೂನ್ 23ರ ಮಂಗಳವಾರ ದಂದು ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಸಮುದಾಯದ ಮುಖಂಡರು, ವಿವಿಧ ಅಧಿಕಾರಿಗಳೊಂದಿಗೆ ಪೂರ್ವಭಾವಿ ಸಭೆ ನಡೆಯಿತು.**

ಇದೇ ವೇಳೆ ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಅವರು ಮಾತನಾಡಿ, ನಾಡಿನ ಅಭಿವೃದ್ಧಿಗಾಗಿ ಜನಪರ ಯೋಜನೆಗಳನ್ನು ಜಾರಿಗೊಳಿಸಿದ ಕೆಂಪೇಗೌಡ ಅವರ ಪರಿಶ್ರಮದಿಂದ ಬೆಂಗಳೂರು ಇಂದು ವಿಶ್ವಮಟ್ಟದಲ್ಲಿ ಹೆಸರು ಗಳಿಸಿದೆ. ಸರ್ಕಾರದ ನಿರ್ದೇಶನದಂತೆ ಕೆಂಪೇಗೌಡ



ಅವರ ಜೀವನ ಸಾಧನೆಗಳನ್ನು ಸ್ಮರಿಸುವ ಸಲುವಾಗಿ ಇದೇ ಜೂನ್ 27 ರಂದು ನಗರದಲ್ಲಿ ಕೆಂಪೇಗೌಡ ಜಯಂತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು. ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಜೂನ್ 27ರಂದು ನಗರದ ಪಂಡಿತ ಜಂಬಲದಿನ್ನಿ ರಂಗಮಂದಿರದಲ್ಲಿ ನಡೆಯುವ ಕಾರ್ಯಕ್ರಮಕ್ಕೆ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು. ಶಿಷ್ಠಾಚಾರಂತೆ ಆಹ್ವಾನ ಪತ್ರಿಕೆ ಮುದ್ರಿಸಿ ಗಣ್ಯರಿಗೆ ವಿತರಿಸಬೇಕು. ಅಂದು ರಂಗಮಂದಿರ ಆವರಣದಲ್ಲಿ ಕುಡಿಯುವ ನೀರು ಸೇರಿದಂತೆ ಎಲ್ಲಾ ಅಗತ್ಯ ಏರ್ಪಾಡು ಮಾಡಬೇಕು.

ನಗರದ ಮುಖ್ಯ ರಸ್ತೆಗಳು ಮತ್ತು ಆವರಣದಲ್ಲಿ ಶುಚಿತ್ವ ಕಾಯ್ದುಕೊಳ್ಳಬೇಕು ಎಂದು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೆ ಅಪರ ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು. ಕಾರ್ಯಕ್ರಮ ಯಶಸಿಗೆ ಸಕಲ ಸಿದ್ಧತೆ ಮಾಡಿಕೊಳ್ಳಲು ಇಲಾಖಾವಾರು ಅಧಿಕಾರಿಗಳಿಗೆ ಜವಾಬ್ದಾರಿ ಹಂಚಿಕೆ ಮಾಡಲಾಗುವುದು. ಯಾವುದೇ ಲೋಪವಾಗದಂತೆ ಅಧಿಕಾರಿಗಳು ಕಾರ್ಯನಿರ್ವಹಿಸಬೇಕು. ಶಾಲಾ ಹಾಗೂ ಕಾಲೇಜ್ ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆಗಳನ್ನು ಹಮ್ಮಿಕೊಂಡು ವಿಜೇತರಿಗೆ ಪ್ರಶಸ್ತಿ ಪ್ರಮಾಣ ಪತ್ರವನ್ನು ನೀಡಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಈ ವೇಳೆ ಸಮಾಜ ಮುಖಂಡರು ಮಾತನಾಡಿ, ವೇದಿಕೆ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಿಸಬೇಕು. ಜನಪ್ರತಿನಿಧಿಗಳು, ಜಿಲ್ಲಾ ಮಟ್ಟದ ಅಧಿಕಾರಿ, ಸಿಬ್ಬಂದಿ ಕಾರ್ಯಕ್ರಮದಲ್ಲಿ ತಪ್ಪದೇ ಪಾಲ್ಗೊಳ್ಳಬೇಕು. ಕಾರ್ಯಕ್ರಮದಲ್ಲಿ ನಾಡಪ್ರಭು ಕೆಂಪೇಗೌಡ ಅವರ ಬಗ್ಗೆ ಉಪನ್ಯಾಸ ಏರ್ಪಡಿಸಬೇಕು ಎಂದು ಸಲಹೆ ಮಾಡಿದರು.

## ಬೂತಲದಿನ್ನಿ ಗ್ರಾಮದಲ್ಲಿ ಶ್ರದ್ಧಾಭಕ್ತಿಯಿಂದ ಅಬ್ಬಾಸ್ ಅಲಿ ಸವಾರಿ ಆಚರಣೆ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ತಾಲ್ಲೂಕಿನ ಬೂತಲದಿನ್ನಿ ಗ್ರಾಮದಲ್ಲಿ ಮೊಹರಂ ಹಬ್ಬದ ಅಂಗವಾಗಿ ಖಾದರ್ ಭಾಷಾ ತಾತನವರ ನೇತೃತ್ವದಲ್ಲಿ ಸದ್ಗುರು ಅಬ್ಬಾಸ್ ಅಲಿ ಪೀರಾ ಅವರ ಆರನೇ ದಿನದ ಸವಾರಿ ಕಾರ್ಯಕ್ರಮವು ಶ್ರದ್ಧಾ ಭಕ್ತಿಯಿಂದ ಜರುಗಿತು.**

ಗ್ರಾಮದ ಹಜರತ್ ಮಹೆಬೂಬ್ ಸುಭಾನಿ ಕಟ್ಟಾ ಆಶರಖಾನಾದಲ್ಲಿ ಅಬ್ಬಾಸ್ ಅಲಿ ಅವರ ಪಂಜಾವನ್ನು ಪ್ರತಿಷ್ಠಾಪಿಸಲಾಗಿದ್ದು, ಮಂಗಳವಾರ ಬೆಳಗಿನಜಾವ ಖಾದರ್‌ಬಾಷಾ ತಾತನವರು ಆರನೇ ದಿನದ ಸವಾರಿ ನಡೆಸಿ, ಭಕ್ತರಿಗೆ ಆಶೀರ್ವಚನ ನೀಡಿ, ನಾಡಿನಲ್ಲಿ ಮಳೆ-ಬೆಳೆ ಸಮೃದ್ಧಿಯಾಗಲಿದೆ ಎಂದು ಹೇಳಿಕೆ ನೀಡಿದರು. ನಂತರ ಅಬ್ಬಾಸ್ ಅಲಿ ದೇವರ ಸವಾರಿ



ಹೊರಟು ಗ್ರಾಮದಲ್ಲಿನ ಮಸೀದಿ, ದರ್ಗಾ ಹಾಗೂ ದೇವಸ್ಥಾನಗಳಿಗೆ ತೆರಳಿ ಪೂಜೆ ನಡೆಸಲಾಯಿತು.

ದೇವರ ಮೆರವಣಿಗೆಯುದ್ದಕ್ಕೂ ಭಕ್ತರು ಸಕ್ಕರೆ, ಮಾದಲಿ ನೀಡಿ ಭಕ್ತಿ ಸಮರ್ಪಿಸಿದರು. ಸವಾರಿ ಕಾರ್ಯಕ್ರಮ ವೀಕ್ಷಿಸಲು ನಾನಾ ಕಡೆಗಳಿಂದ ಜನರು ತಂಡೋಪ ತಂಡವಾಗಿ ಬಂದಿದ್ದರು. ಸವಾರಿ ಹಿಂದಿನ ಸೋಮವಾರ ವಿವಿಧ ಧಾರ್ಮಿಕ ವಿಧಿ-ವಿಧಾನಗಳು ಜರುಗಿದವು. ಸಿಪಿಐ ವಿನಾಯಕ, ಬಿಜೆಪಿ ಮುಖಂಡ ಕೆ.ಕರಿಯಪ್ಪ, ಆರ್.ಡಿಸಿಸಿ ಬ್ಯಾಂಕ್ ನಿರ್ದೇಶಕ ಸೋಮನಗೌಡ ಬಾದರ್ಲಿ, ಜೆಡಿಎಸ್ ಯುವ ಮುಖಂಡ ಅಭಿಷೇಕ ನಾಡಗೌಡ ಭೇಟಿ ನೀಡಿ, ಸದ್ಗುರು ಅಬ್ಬಾಸ್ ಅಲಿ ಶರಣರ ದರ್ಶನ ಪಡೆದರು. ಬೂತಲದಿನ್ನಿ ಸೇರಿದಂತೆ ಸುತ್ತಮುತ್ತಲಿ ಗ್ರಾಮಸ್ಥರು ಭಾಗವಹಿಸಿದ್ದರು.

## ಸ್ಪಷ್ಟ ಮಾಹಿತಿಯೊಂದಿಗೆ ಸಭೆಗೆ ಬನ್ನಿ,ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದ ಶಾಸಕ ಅರ್ ಬಸನಗೌಡ ತುರುವಿಹಾಳ

❑ ನೈಜ್ಯ ದೆಸೆ ನ್ಯೂಸ್

**ಮಸ್ಕಿ ತಾಲ್ಲೂಕು ಪಂಚಾಯತಯಲ್ಲಿ ಕುಡಿಯುವ ನೀರಿನ ಪರಿಶೀಲನಾ ಸಭೆ ನಡೆಯಿತು. ಅದ್ಯಕ್ಷತೆವಹಿಸಿ ಮಾತನಾಡಿದ ಶಾಸಕ ಆರ್ ಬಸನಗೌಡ ತುರುವಿಹಾಳ ಸಭೆಯಲ್ಲಿ ಭಾಗವಹಿಸಿದ ತಾಲ್ಲೂಕ ಮಟ್ಟದ ಅಧಿಕಾರಿಗಳು, ಗ್ರಾಮ ಪಂಚಾಯತಿ ಪಿಡಿಒ ಗಳಿಗೆ ಸಭೆಗೆ ಬರಬೇಕಾದರೆ ಸ್ಪಷ್ಟವಾದ ಮಾಹಿತಿ ಕೊಡಬೇಕು, ಸಂಬಂಧಿಸಿದ ಅಧಿಕಾರಿಗಳೆ ಬರಬೇಕು .**

ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ,ಹಕ್ಕುಪತ್ರ ವಿತರಣೆ, ಕಂದಾಯ ಗ್ರಾಮಗಳು ವಿಚಾರವಾಗಿ ಹಿಂದಿನ ಸಭೆಯಲ್ಲಿ ಹೇಳಿದರು ,ಇಂದು ನಡೆದ ಸಭೆಗೆ ಸರಿಯಾಗಿ ಮಾಹಿತಿ ಕೊಡದ ಪಿಡಿಒಗಳಿಗೆ ತರಾಟೆಗೆ ತೆಗೆದುಕೊಂಡು ಖಡಕ್ ಎಚ್ಚರಿಕೆ ನೀಡಿದರು.ಹಳ್ಳಿಗಳಲ್ಲಿ



ವಿದ್ಯುತ್ ವ್ಯತ್ಯಯ ಕೊರತೆಯಿಂದ ನೀರಿನ ಸಮಸ್ಯೆ ಉಲ್ಬಣಗೊಂಡ ಕಾರಣ,ಸಭೆಯಲ್ಲಿದ್ದ ಜೆಸ್ಕಾಂ ಅಧಿಕಾರಿ ವೆಂಕಟೇಶಗೆ ಸರಿಪಡಿಸಲು ತಿಳಿಸಿ, ಹಾಗೆ ಹಳ್ಳಿಗಳಲ್ಲಿರುವ ಸರಕಾರದ ಯಾವುದೇ ಸಮುದಾಯ ಭವನಗಳು ಇರಲಿ ಆಯಾ ಗ್ರಾಮ ಪಂಚಾಯತಿ ಪಿಡಿಒಗಳು ತಮ್ಮ ಅಧೀನಕ್ಕೆ ತಗೊಂಡು,ಇಂತಿಷ್ಟು ಶುಲ್ಕ ಮಾಡಿ ಸಾರ್ವಜನಿಕ ಸಭೆಗಳಿಗೆ ಅವಕಾಶ ಮಾಡಬೇಕು,ಸರಿಯಾಗಿ ನೋಡಿಕೊಳ್ಳಬೇಕು ಎಂದು ಹೇಳಿದರು.ಸಭೆಯಲ್ಲಿ ತಹಶಿಲ್ದಾರರ ಮಂಜುನಾಥ ಬೋಗಾವತಿ,ಪ್ರಭಾರಿ ಇಒ ಶಿವನಂದರಡ್ಡಿ,ಸಹಾಯಕ ನಿರ್ದೇಶಕ ಸೊಮನಗೌಡ ಹಾಗೂ ಇನ್ನಿತರ ಅಧಿಕಾರಿಗಳು, ಪಿಡಿಒಗಳು ಇದ್ದರು.

# ವರುಣನ ಕೃಪೆ ಯಾವಾಗ ? ವರುಣನಿಗಾಗಿ ಆಕಾಶದತ್ತ ಮುಖ ಮಾಡಿದ ರೈತರು

❑ ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ತಾಲೂಕಿನಲ್ಲಿ ಮುಂಗಾರು ಮಳೆಯ ವಿಳಂಬದಿಂದ ರೈತರು ಆತಂಕಕ್ಕೆ ಒಳಗಾಗಿದ್ದಾರೆ. ಕೆಲವೆಡೆ ಮಳೆಯಾದ ಕಾರಣ ರೈತರು ಬಿತ್ತನೆ ಕಾರ್ಯ ಪೂರ್ಣಗೊಳಿಸಿದ್ದರೆ, ಇನ್ನೂ ಅನೇಕ ಕಡೆಗಳಲ್ಲಿ ಮಳೆಯ ಕೊರತೆಯಿಂದ ಹೊಲಗಳು ಖಾಲಿಯಾಗಿಯೇ ಉಳಿದಿವೆ. ರೈತರು ಈಗಾಗಲೇ ಟ್ರ್ಯಾಕ್ಟರ್ ನಿಂದ ಹೊಲ ಸ್ವಚ್ಛ ಗೊಳಿಸಿ ಹೊಲಗಳನ್ನು ಬಿತ್ತನೆಗೆ ಸಜ್ಜುಗೊಳಿಸಿದ್ದಾರೆ.**

ಕಸ-ಕಡ್ಡಿಗಳನ್ನು ತೆರವುಗೊಳಿಸಿ, ಬೀಜ ಹಾಗೂ ರಸ ಗೊಬ್ಬರಗಳನ್ನು ಖರೀದಿಸಿ ಸಂಗ್ರಹಿಸಿದ್ದಾರೆ. ಆದರೆ ಬಿತ್ತನೆಗೆ ಅಗತ್ಯವಾದ ಸಮರ್ಪಕ ಮಳೆ ಇನ್ನೂ ಸುರಿಯದಿರುವುದು



ರೈತರ ಚಿಂತೆಗೆ ಕಾರಣವಾಗಿದೆ.ಮುಂಗಾರು ಹಂಗಾಮು ಆರಂಭವಾಗುತ್ತಿದ್ದಂತೆ ಕೆಲ ರೈತರು ಬಿತ್ತನೆ ನಡೆಸಿದ್ದು, ಹೆಸರು, ತೊಗರಿ ಸೇರಿದಂತೆ ವಿವಿಧ ಬೆಳೆಗಳು ಮೊಳಕೆಯೊಡೆದಿವೆ. ಆದರೆ ಮಳೆಯ ಕೊರತೆಯಿಂದ ಮೊಳಕೆ ಬಂದ ಸಸಿಗಳು ಒಣಗುತ್ತಿದ್ದು, ಜೂನ್ ತಿಂಗಳು ಅಂತ್ಯದತ್ತ ಸಾಗುತ್ತಿದ್ದರೂ ನಿರೀಕ್ಷಿತ ಮಳೆಯ ಯಾವುದೇ ಲಕ್ಷಣಗಳು ಕಾಣಿಸದಿರು ವುದರಿಂದ ರೈತರು ದಿನದಿಂದ ದಿನಕ್ಕೆ ಆತಂಕಕ್ಕೊಳಗಾಗುತ್ತಿದ್ದಾರೆಆಗಾಗ ಮೋಡಗಳು ಕವಿದರೂ ಮಳೆ ಸುರಿ ಯದಿರುವುದು ರೈತರ ನಿರಾಸೆಯನ್ನು ಮತ್ತಷ್ಟು ಹೆಚ್ಚಿಸಿದೆ.

ಕೆಲವಡೆ ತುಂ ತುರು ಮಳೆಯಾದರೂ ಕೃಷಿ ಚಟುವಟಿಕೆ ಆರಂಭಿಸಲು ಬೇಕಾದಷ್ಟು ಪ್ರಮಾಣದಲ್ಲಿ ಮಳೆಯಾಗಿಲ್ಲ. ಮಳೆಯ ಅಭಾವದಿಂದ ಬೇಸಿಗೆ ಬಿಸಿಲು ತೀವ್ರಗೊಂಡಿದ್ದು, ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಬಿತ್ತನೆ ತಡವಾದಲ್ಲಿ ಇಳುವರಿ ಕುಸಿತ, ಮೇವು ಕೊರತೆ ಹಾಗೂ ಕುಡಿಯುವ ನೀರಿನ ಸಮಸ್ಯೆ ಎದುರಾಗುವ ಭೀತಿ ಹೆಚ್ಚಾಗಿದೆ. ಬಿತ್ತನೆಗೆ ಅಗತ್ಯವಿರುವ ಎಲ್ಲ ಸಿದ್ಧತೆಗಳನ್ನು ರೈತರು ಮಾಡಿಕೊಂಡಿದ್ದಾರೆ ಆದರೆ ಸಮರ್ಪಕ ಮಳೆಯಿಲ್ಲದೆ ಬಿತ್ತನೆ ಮುಂದೂಡಬೇಕಾದ ಪರಿಸ್ಥಿತಿ ಎದುರಾಗಿದೆ.

ಮಳೆ ಇನ್ನೂ ವಿಳಂಬ ವಾದರೆ ಅನಾವೃಷ್ಟಿಯ ಭೀತಿ ಎದುರಾಗಬಹುದು ಎಂದು ರೈತರು ಆತಂಕ ವ್ಯಕ್ತಪಡಿಸಿದ್ದಾರೆ. ಜಿಲ್ಲೆಯಾದ್ಯಂತ ರೈತರು ವರುಣನ ಕೃಪೆಗಾಗಿ ಆಕಾಶದತ್ತ ಮುಖ ಮಾಡಿ ಕಾದು ಕುಳಿತಿದ್ದು, ಶೀಘ್ರದಲ್ಲೇ ಉತ್ತಮವಾಗಿ ವರುಣ ತನ್ನ ಕೃಪೆ ತೋರಲಿ ಎಂಬ ಆಶಯದಲ್ಲಿ ರೈತರು ತಮ್ಮ ಅಳಲನ್ನು ವ್ಯಕ್ತಪಡಿಸುತ್ತಿದ್ದಾರೆ.

## ಸಾಹಿತ್ಯ ಸಿಂಚನ

### ನಗು

ನಗು ಎಂಬುದು ದೇವರ ವರ,
ಮನದೊಳಗೆ ಅರಳುವ ಹೂವಿನ ಪರಿಮಳ.
ನಗುವ ಮುಖ ಕಂಡ ಕ್ಷಣವೇ,
ದುಃಖಗಳೆಲ್ಲ ದೂರವಾಗುವವು.

ನಗುವಿನಲಿ ಮಮತೆ ತುಂಬಿ,
ಪ್ರೀತಿಯಲಿ ಬಂಧ ಬೆಳೆಸುತ್ತದೆ.
ಒಂದು ನಗು ನೀಡಿದರೆ ಸಾಕು,
ನೂರು ಹೃದಯ ಗೆಲ್ಲಬಹುದು.

ನಗುತಿರೋಣ ಸದಾ ಬದುಕಿನಲ್ಲಿ,
ಸಂತೋಷ ಹಂಚೋಣ ಎಲ್ಲರೊಂದಿಗೆ.
ನಗುವೇ ಜೀವನದ ನಿಜ ಆಭರಣ,
ಅದು ಮನುಜರ ಅಮೂಲ್ಯ ಧನ

ರಮೇಶ್

# ಜೂನ್ 28 ರಂದು ನಿಮ್ಮ ಐದು ವರ್ಷದೊಳಗಿನ ಮಕ್ಕಳಿಗೆ ಪೋಲಿಯೋ ಹಾಕಿಸಿ

ನೈಜ್ಯ ದೇಸೆ ನ್ಯೂಸ್

**ಸಿಂಧನೂರು: ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ರಾಯಚೂರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರ್ ತಾಲೂಕು ಅರೋಗ್ಯಾಧಿಕಾರಿಗಳ ಕಾರ್ಯಾಲಯ ಸಿಂಧನೂರು ಹಾಗೂ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ಇವರ ಸಂಯುಕ್ತಾಶ್ರಯದಲ್ಲಿ ಸಿಂಧನೂರು ಜೂನ್– 23 ನಗರದ ಆದ– ೯ರ್ಶ ಕಾಲೋನಿ ಉಪಕೇಂದ್ರದ ವೆಂಚರ ಇಂಗ್ಲಿಷ್ ಮಾಧ್ಯಮ ಶಾಲೆ ಸಿಂಧನೂರು,**

ಶಾಲೆಯಲ್ಲಿ ಗೀತಾ ಹಿರೇಮಠ ತಾಲೂಕು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ತಾಲೂಕು ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ಸಿಂಧನೂರು ಇವರು ಮುಂಬರುವ ಜೂನ್ 28 ರಂದು ರಾಷ್ಟ್ರವ್ಯಂತ ಪಲ್ಸ್ ಪೋಲಿಯೊ ಲಸಿಕಾ ಕಾರ್ಯಕ್ರಮದ ಅಭಿಯಾನ ನೆಡೆಯಲಿದೆ ಎಂದು ಜಾಗೃತಿ ಜಾತ ಕಾರ್ಯಕ್ರಮದ ಜೊತೆಗೆ ಆರೋಗ್ಯ ಶಿಕ್ಷಣ ನೀಡಿ ಐದು ವರ್ಷದೊಳಗಿನ ಮಕ್ಕಳಿಗೆಎರಡು ಹನಿ ಪೋಲಿಯೊ ಲಸಿಕೆ ಹಾಕಿಸಿ ಪೋಲಿಯೋ ವೈರಸ್




ನಿಂದ ಉಂಟಾಗುವ ನಈ ರೋಗವು ಮಕ್ಕಳ ನರಮಂಡಲದ ಮೇಲೆ ಪರಿಣಾಮ ಬೀರಿದ್ದು,

ಜೀವಿತಾವಧಿಯ ಅಂಗವಿಕಲತೆಗೆ ಕಾರಣವಾಗಬಹುದು ಆದರೆ ಸಮಯಕ್ಕೆ ಸರಿಯಾಗಿ ಪೋಲಿಯೋ ಹನಿ ಹಾಕಿಸುವುದ–ರಿಂದ ಈ ರೋಗವನ್ನು ಪರಿಣಾಮಕಾ–ರಿಯಾಗಿ ತಡೆಗಟ್ಟಬಹುದು ಮಗು ಈಗಾಗಲೇ ನಿಯಮಿತ ಲಸಿಕೆಗಳನ್ನು ಪಡೆದಿದ್ದರೂ ಸಹ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮದ ಅಭಿಯಾನದಡಿ ನೀಡುವ ಹೆಚ್ಚುವರಿ ಪೋಲಿಯೋ ಹನಿಯನ್ನು ತಪ್ಪದೆ ಹಾಕಿಸಬೇಕು ಎಂದು ಆರೋಗ್ಯ ಇಲಾಖೆಯಿಂದ ಮನವಿ

ಪ್ರತಿಯೊಬ್ಬ ಪೋಷಕರು ತಮ್ಮ 5 ವರ್ಷದೋಳಗಿನ ಮಕ್ಕಳನ್ನು ಸಮೀಪದ ಪೋಲಿಯೋ ಕೇಂದ್ರಕ್ಕೆ ಕರೆ ತಂದು ಎರಡು ಹನಿ ಪೋಲಿಯೋ ಲಸಿಕೆಯನ್ನು ಹಾಕಿಸುವ ಮೂಲಕ ಪಲ್ಸ್ ಪೋಲಿಯೊ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ತಿಳಿಸಿದರು ನಿಮ್ಮ ಆರೋಗ್ಯಕ್ಕಾಗಿ ತಪ್ಪದೇ ಪಲ್ಸ್ ಪೋಲಿಯೋ ಕಾರ್ಯಕ್ರಮದಲ್ಲಿ ಭಾಗವಹಿಸಿ ಐದು ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ತಪ್ಪದೇ ಪೋಲಿಯೋ ಹನಿ ಹಾಕಿಸಿ ಎರಡು ಹನಿ ಪೋಲಿಯೋ ನಿಮ್ಮ ಮಕ್ಕಳ ಆರೋಗ್ಯದ ಜೀವಾಮೃತ ಸರ್ಕಾರಿ ಆಸ್ಪತ್ರೆಗಳು ಪ್ರಾಥಮಿಕ ಆರೋಗ್ಯ ಕೇಂದ್ರಗಳು,ಅಂಗನವಾಡಿ ಕೇಂದ್ರಗಳು,

ಬಸ್ ನಿಲ್ದಾಣದಲ್ಲಿ,ಹಾಗೂ ವಿಶೇಷ ಪೋಲಿಯೋ ಭೂತಗಳಲ್ಲಿ ಪೋಲಿಯೋ ಲಸಿಕೆ ಹಾಕಲಾಗುವುದು ಪಾಲಕರು ತಮ್ಮ ಮಕ್ಕಳಿಗೆ ತಪ್ಪದೇ ಜೂನ್ 28ರಂದು ಪೋಲಿಯೋ ಬೂತಕ್ಕೆ ನಿಮ್ಮ 5 ವರ್ಷದೊಳಗಿನ ಮಕ್ಕಳನ್ನು ಕರೆತಂದು ಪೋಲಿಯೋ ಹನಿ ಹಾಕಿಸುವುದು ಮರೆಯಬೇಡಿ ಎಂದರು. ಈ ಸಂದರ್ಭದಲ್ಲಿ ಕಮಲ ಕಊಅಔ, ಹನುಮಂತ ಊಖಔ, ವೆಂಚರ್ ಶಾಲೆಯ ಅಬ್ಬುಲೇಶ್ ಮುಖ್ಯೋಪಾಧ್ಯಾಯರು ಶಾಪಿನ ಬೇಗಂ, ಶಾಲಾ ಶಿಕ್ಷಕರು, ಅಮೃತ,ಯಶೋದಾ ಆಶಾ ಕಾರ್ಯಕರ್ತೆಯರು ಉಪಸ್ಥಿತರಿದ್ದರು.

## ವಿದ್ಯಾರ್ಥಿಗಳಿಗೆ ವಿ ಎಸ್ ಕೆ ಫೌಂಡೇಷನ್ ನಿಂದ 2000 ನೋಟ್ ಪುಸ್ತಕಗಳ ವಿತರಣೆ

ನೈಜ್ಯ ದೇಸೆ ನ್ಯೂಸ್

**ಲಿಂಗಸಗೂರು: ಜೂ 24 – ಶಿಕ್ಷಣಕ್ಕೆ ಉತ್ತೇಜನ ನೀಡುವ ಉದ್ದೇಶದಿಂದ ಬೆಂಗಳೂರು ಮೂಲದ ವಿಎಸ್‌ಕೆ ಫೌಂಡೇಶನ್ ವತಿಯಿಂದ ತಾಲೂಕಿನ ವಿವಿಧ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗೆ 2000 ಉಚಿತ ನೋಟ್ ಪುಸ್ತಕಗಳು ಹಾಗೂ ಬರವಣಿಗೆ ಸಾಮಾಗ್ರಿಗಳನ್ನು ವಿತರಿಸಲಾಯಿತು.**



ತಾಲೂಕಿನ ಮರಗಂಟನಾಳ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಲಾದ ಕಾರ್ಯಕ್ರಮದಲ್ಲಿ ಶಾಲಾ ಮಕ್ಕಳಿಗೆ ನೋಟ್ ಪುಸ್ತಕಗಳು ಹಾಗೂ ಇತರೆ ಶೈಕ್ಷಣಿಕ ಸಾಮಾಗ್ರಿಗಳ ವಿತರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ವಿಎಸ್ ಕೆ ಫೌಂಡೇಶನ್‌ನ ಉಪಾಧ್ಯಕ್ಷರಾದ ರಾಮುಗೋಪಾಲ್ ವಿದ್ಯಾರ್ಥಿಗಳ ಕಲಿಕಾ ಪ್ರಕ್ರಿಯೆಯಲ್ಲಿ ನೋಟ್ ಪುಸ್ತಕಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ.

ಅವು ವಿದ್ಯಾರ್ಥಿಗಳ ಗ್ರಹಿಕೆ ಶಕ್ತಿಯನ್ನು ಹೆಚ್ಚಿಸುವುದರ ಜೊತೆಗೆ ಕಲಿತ ವಿಷಯಗಳನ್ನು ದೀರ್ಘಕಾಲ ನೆನಪಿನಲ್ಲಿ ಉಳಿಸಿಕೊಳ್ಳಲು ಸಹಕಾರಿಯಾಗುತ್ತವೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಫೌಂಡೇಶನ್‌ನ ನಿರ್ದೇಶಕರಾದ ಕಿಶೋರ್ ಕುಮಾರ್, ಸಮೂಹ ಸಂಪನ್ಮೂಲ ವ್ಯಕ್ತಿಗಳಾದ ಮುಕ್ತಮ್ ಸಾಬ್ ತಾಳಿಕೋಟೆ ಹಾಗೂ ಯಾಸೀನ್, ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಅಮೀನ್ ಸಾಬ್, ಉಪಾ ಧ್ಯಕ್ಷ ಹುಸೇನಪ್ಪ, ಎಸ್‌ಡಿಎಂಸಿ ಸದಸ್ಯರು, ಗ್ರಾಮಸ್ಥರು, ಶಿಕ್ಷಣ ಪ್ರೇಮಿಗಳು, ಮುಖ್ಯ ಶಿಕ್ಷಕರಾದ ವೀರಭದ್ರಪ್ಪ, ಶಾಲೆಯ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ, ಅತಿಥಿ ಶಿಕ್ಷಕ–ಶಿಕ್ಷಕಿಯರು ಹಾಗೂ ವಿದ್ಯಾರ್ಥಿಗಳು ಇದ್ದರು.

ನೈಜ್ಯ ದೇಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ಆರೋಪ : ಮೂರಾರ್ಜಿ ವಸತಿ ಶಾಲೆಯಲ್ಲಿ ಪ್ರತಿಭಟನೆ, ವಾಚ್‌ಮ್ಯಾನ್ ವಿರುದ್ಧ ಕ್ರಮಕ್ಕೆ ಆಗ್ರಹ

ನೈಜ್ಯ ದೇಸೆ ನ್ಯೂಸ್

**ಬಳ್ಳಾರಿ : ಕಂಪ್ಲಿ : ತಾಲೂಕಿನ ರಾಮಸಾಗರ ಹೊರವಲಯದಲ್ಲಿರುವ ಮೂರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ವಾಚ್‌ಮ್ಯಾನ್ ಆಗಿ ಕಾರ್ಯನಿರ್ವಹಿಸುತ್ತಿರುವ ಸಿದ್ದಲಿಂಗಯ್ಯ ಎಂಬಾತ ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿರುವ ಆರೋಪ ಕೇಳಿಬಂದಿದ್ದು, ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು, ಪೋಷಕರು ಹಾಗೂ ಶಿಕ್ಷಕರು ಆಕ್ರೋಶ ವ್ಯಕ್ತಪಡಿಸಿ ಪ್ರತಿಭಟನೆ ನಡೆಸಿದ ಘಟನೆ ಬೆಳಕಿಗೆ ಬಂದಿದೆ.**

ವಿದ್ಯಾರ್ಥಿನಿಯರ ಆರೋಪದ ಪ್ರಕಾರ, ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ ಸಿದ್ದಲಿಂಗಯ್ಯ ಹಲವು ದಿನಗಳಿಂದ ಅಶ್ಲೀಲವಾಗಿ ಮಾತನಾಡುವುದು, ವಿದ್ಯಾರ್ಥಿನಿಯರ ಖಾಸಗಿ ಅಂಗಾಂಗಗಳನ್ನು ಮುಟ್ಟುವುದು ಹಾಗೂ ಈ ವಿಷಯವನ್ನು ಯಾರಿಗೂ ತಿಳಿಸದಂತೆ ಬೆದ–ರಿಕೆ ಹಾಕುವುದು ಸೇರಿದಂತೆ ಅನಾಚಾರ



ವರ್ತನೆ ನಡೆಸುತ್ತಿದ್ದ ಎನ್ನಲಾಗಿದೆ. ಈ ಬಗ್ಗೆ ಶಾಲಾ ಶಿಕ್ಷಕರು ಹಲವು ಬಾರಿ ಎಚ್ಚರಿಕೆ ನೀಡಿದ್ದರೂ ಆರೋಪಿತ ತನ್ನ ವರ್ತನೆಯನ್ನು ಬದಲಾಯಿಸಿಲ್ಲ ಎಂದು ತಿಳಿದುಬಂದಿದೆ.

ಈ ಕಿರುಕುಳದಿಂದಾಗಿ ಹಲವು ವಿದ್ಯಾರ್ಥಿನಿಯರು ಶಾಲೆ ಹಾಗೂ ವಸತಿ ನಿಲಯದಲ್ಲಿ ಉಳಿಯಲು ಭಯಪಡುತ್ತಿದ್ದು, ಮನೆಗೆ ಮರಳುವ ನಿರ್ಧಾರಕ್ಕೂ ಮುಂದಾಗಿದ್ದರು ಎನ್ನಲಾಗಿದೆ. ಬಳಿಕ ವಿದ್ಯಾರ್ಥಿನಿಯರು ತಮ್ಮ ಪೋಷಕರಿಗೆ ನಡೆದ ಘಟನೆಗಳ ಬಗ್ಗೆ ವಿವರಿಸಿದ್ದು, ಪೋಷಕರು ಹಾಗೂ ಸ್ಥಳೀಯರು ಶಾಲೆಗೆ ಆಗಮಿಸಿ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ವಿದ್ಯಾರ್ಥಿಗಳು, ಪೋಷಕರು ಹಾಗೂ ಶಿಕ್ಷಕರು ಶಾಲಾ ಆವರಣದಲ್ಲಿ ಸೇರಿ ಆರೋಪಿತ ವಾಚ್‌ಮ್ಯಾನ್ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

ಮಕ್ಕಳ ಶಿಕ್ಷಣ ಮತ್ತು ಸುರಕ್ಷತೆಗೆ ಅನುಕೂಲಕರ ವಾತಾವರಣ ನಿರ್ಮಾಣವಾಗಬೇಕಾದ ವಸತಿ ಶಾಲೆಯಲ್ಲೇ ಇಂತಹ ಘಟನೆ ನಡೆದಿರುವುದು ಆತಂಕಕ್ಕೆ ಕಾರಣವಾಗಿದೆ ಎಂದು ಪೋಷಕರು ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆಯ ಹಿನ್ನೆಲೆಯಲ್ಲಿ ವಿಜಯನಗರ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ವೈ.ಎನ್. ಕಾಳೆ ಅವರು ವಸತಿ ಶಾಲೆಗೆ ಭೇಟಿ ನೀಡಿ ಪರಿಸ್ಥಿತಿಯ ಪರಿಶೀಲನೆ ನಡೆಸಿದರು. ಪೋಷಕರ ಹಾಗೂ ವಿದ್ಯಾರ್ಥಿಗಳ ಒತ್ತಾಯದ ಮೇರೆಗೆ ಆರೋಪ ಎದುರಿಸುತ್ತಿರುವ ಸಿದ್ದಲಿಂಗಯ್ಯನನ್ನು ತಕ್ಷಣದಿಂದಲೇ ಕಾಳಘಟ್ಟ ವಸತಿ ಶಾಲೆಗೆ ವರ್ಗಾವಣೆ ಮಾಡಲಾಗಿದೆ ಎಂದು ತಿಳಿಸಿದರು.

ಆದರೆ, ಕೇವಲ ವರ್ಗಾವಣೆ ಕ್ರಮ ಸಾಕಾಗುವುದಿಲ್ಲ. ವಿದ್ಯಾರ್ಥಿನಿಯರ ಆರೋಪಗಳ ಬಗ್ಗೆ ಸಮಗ್ರ ತನಿಖೆ ನಡೆಸಿ, ಸತ್ಯಾಂಶ ಕಂಡುಬಂದಲ್ಲಿ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಪೋಷಕರು, ಶಿಕ್ಷಕರು ಹಾಗೂ ಸಾರ್ವಜನಿಕರು ಆಗ್ರಹಿಸಿದ್ದಾರೆ. ಪ್ರಕರಣದ ಕುರಿತು ಸಂಬಂಧಿತ ಇಲಾಖೆಗಳು ಹಾಗೂ ಪೊಲೀಸ್ ಅಧಿಕಾರಿಗಳು ಸೂಕ್ತ ತನಿಖೆ ನಡೆಸುವಂತೆ ಒತ್ತಾಯಗಳು ಕೇಳಿಬರುತ್ತಿವೆ.

ವರದಿ : ಜಿಲಾನಸಾಬ್ ಬಡಿಗೇರ್

## ದೇವಸೂಗೂರಿನ ಶ್ರೀ ಸುಗುರೇಶ್ವರ ಕರಾಟೆ ಸಂಸ್ಥೆಯಲ್ಲಿ ಬೆಲ್ಟ್ ವಿತರಣಾ ಸಮಾರಂಭ

# ವಿದ್ಯಾರ್ಥಿನಿ ಕೀರ್ತಿಗೆ ಬ್ಲಾಕ್ ಬೆಲ್ಟ್ ಗೌರವ

ನೈಜ್ಯ ದೇಸೆ ನ್ಯೂಸ್

**ರಾಯಚೂರು: ಇಂದಿನ ದಿನಗಳಲ್ಲಿ ಕರಾಟೆ ಕೇವಲ ಒಂದು ಕಲೆಯಲ್ಲ, ಅದು ಆತ್ಮರಕ್ಷಣೆಗೆ ಪ್ರತಿಯೊಬ್ಬರೂ ಕಲಿಯಬೇಕಾದ ಅತ್ಯಗತ್ಯ ವಿದ್ಯೆಯಾಗಿದ್ದು, ಕರಾಟೆಯಿಂದ ಮಕ್ಕಳಲ್ಲಿ ದೈಹಿಕ ಸಾಮರ್ಥ್ಯದ ಜೊತೆಗೆ ಮಾನಸಿಕ ಏಕಾಗ್ರತೆ ಹಾಗೂ ಕಠಿಣ ಶಿಸ್ತು ಬೆಳೆಯುತ್ತದೆ ಎಂದು ಮಾಜಿ ಸೈನಿಕ ಮಹಮ್ಮದ್ ಸಲೀಂ ಹೇಳಿದರು.**

ಅವರು ದೇವಸೂಗೂರಿನ ಶ್ರೀ ಸುಗುರೇಶ್ವರ ಕರಾಟೆ ಸಂಸ್ಥೆ ವತಿಯಿಂದ ಆಯೋಜಿಸಿದ್ದ ವಿದ್ಯಾರ್ಥಿಗಳ ಬೆಲ್ಟ್ ಪರೀಕ್ಷೆಯ ಫಲಿತಾಂಶ ಪ್ರಕಟಣೆ ಹಾಗೂ ವಿವಿಧ ಬಣ್ಣಗಳ ಬೆಲ್ಟ್ ವಿತರಣಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ವಿದ್ಯಾರ್ಥಿಗಳು ಹಲವು ತಿಂಗಳುಗಳ ಶ್ರಮ ಮತ್ತು ನಿಯಮಿತ ಅಭ್ಯಾಸದ ಫಲವಾಗಿ ಮುಂದಿನ ಹಂತದ ಬೆಲ್ಟ್‌ಗಳನ್ನು ಪಡೆದುಕೊಂಡಿದ್ದು, ಬಿಳಿ ಬೆಲ್ಟ್‌ನಿಂದ ಆರಂಭಿಸಿ ಅತ್ಯುನ್ನತ ಕಪ್ಪು ಬೆಲ್ಟ್ (ಬ್ಲಾಕ್ ಬೆಲ್ಟ್) ವರೆಗೆ ಸಾಗುವ ಪಯಣದಲ್ಲಿ ಇದೇ ಶಿಸ್ತು ಮತ್ತು ಬದ್ಧತೆಯನ್ನು ಮುಂದುವರಿಸಬೇಕು ಎಂದು




ಕರೆ ನೀಡಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಕರಾಟೆ ಪಟು ರಾಜೇಶ್ ಮಾತನಾಡಿ, ಇಂದಿನ ದಿನಗಳಲ್ಲಿ ಮಕ್ಕಳಿಗೆ, ವಿಶೇಷವಾಗಿ ಹೆಣ್ಣುಮಕ್ಕಳಿಗೆ ಕರಾಟೆ ಅತ್ಯಗತ್ಯವಾದ ಆತ್ಮರಕ್ಷಣಾ ಕಲೆಯಾಗಿದ್ದು, ಇದು ದೈಹಿಕ ಸಾಮರ್ಥ್ಯವನ್ನು ಹೆಚ್ಚಿಸುವುದರ ಜೊತೆಗೆ ಧೈರ್ಯ, ಶಿಸ್ತು ಮತ್ತು ಮಾನಸಿಕ ಏಕಾಗ್ರತೆಯನ್ನು ಬೆಳೆಸುತ್ತದೆ ಎಂದು ತಿಳಿಸಿದರು. ಕರಾಟೆ ತರಬೇತಿ ಕೇಂದ್ರದ ಮುಖ್ಯ ಶಿಕ್ಷಕರಾದ ಸೂಗಪ್ಪ ಮಾತನಾಡಿ, ವಿದ್ಯಾರ್ಥಿಗಳು ನಿರಂತರ ಅಭ್ಯಾಸ ಮತ್ತು ಬದ್ಧತೆಯಿಂದ ಮುಂದಿನ ಹಂತದ ಬೆಲ್ಟ್‌ಗಳನ್ನು ಪಡೆದಿದ್ದು, ಇದೇ ಶಿಸ್ತನ್ನು ಕಾಯ್ದುಕೊಂಡು ಉನ್ನತ ಕಪ್ಪು ಬೆಲ್ಟ್ ಸಾಧಿಸುವತ್ತ ಸಾಗಬೇಕು ಎಂದು ಹಾರೈಸಿದರು.

ಇದೇ ಸಂದರ್ಭದಲ್ಲಿ ದೇವಸೂಗೂ–ರಿನ ದಿವಂಗತ ವಿಶ್ವನಾಥ ಗದ್ದಿಮಠ ಅವರ ಸ್ಮರಣಾರ್ಥವಾಗಿ ಅವರ ಪುತ್ರ ನವೀನ್ ಗದ್ದಿಮಠ ಹಾಗೂ ಶೋಭಾ ಗದ್ದಿಮಠ ಅವರು ಕಾರ್ಯಕ್ರಮಕ್ಕೆ ಆಗಮಿಸಿದ್ದ ಅತಿಥಿಗಳಿಗೆ ಸ್ಮರಣ ಸಂಚಿಕೆ ನೀಡಿ ಗೌರವಿಸಿದರು. ಸಂಸ್ಥೆಯ ವಿದ್ಯಾರ್ಥಿನಿ ಕೀರ್ತಿ ಬ್ಲಾಕ್ ಬೆಲ್ಟ್ ಪಡೆದಿರುವುದು ಸಂತಸದ ಸಂಗತಿಯಾಗಿದೆ ಎಂದು ತಿಳಿಸಿದರು. ಬಳಿಕ ಕರಾಟೆ ತರಬೇತಿಯಲ್ಲಿ ಅತ್ಯುತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಅವರವರ ಹಂತಗಳಿಗೆ ಅನುಗುಣವಾಗಿ ಬಿಳಿ, ಹಳದಿ, ಹಸಿರು, ನೀಲಿ ಹಾಗೂ ಕಂದು ಬಣ್ಣದ ಬೆಲ್ಟ್‌ಗಳು ಮತ್ತು ಪ್ರಮಾಣಪತ್ರಗಳನ್ನು ವಿತರಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಡಾ. ಅಭಿಷೇಕ್, ಗ್ರಾಮ ಪಂಚಾಯಿತಿ ಸದಸ್ಯ ಆನಂದ್ ಕುಮಾರ್, ತರಬೇತುದಾರರು, ಪೋಷಕರು ಹಾಗೂ ಕರಾಟೆ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ವರದಿ: ಖಾಜಾ ಹುಸೇನ್ ಬಾಬಾ ಜಾಲಹಳ್ಳಿ.

## ಜಾಲಹಳ್ಳಿಯಲ್ಲಿ ಅಂಧರ ಸೇವಾ ಕಲಾತಂಡದಿಂದ ಸುಗಮ ಸಂಗೀತ ಮತ್ತು ಆರ್ಕೆಸ್ಟ್ರಾ ಕಾರ್ಯಕ್ರಮ ಯಶಸ್ವಿ

ನೈಜ್ಯ ದೇಸೆ ನ್ಯೂಸ್

**ಜಾಲಹಳ್ಳಿ,ದೇವದುರ್ಗ: ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಗ್ರಾಮದ ಅಂಬೇಡ್ಕರ್ ವೃತ್ತದಲ್ಲಿ ಬೆಂಗಳೂರಿನ ಶ್ರೀ ಮಾರುತಿ ಪ್ರಸನ್ನ ಅಂಧರ ಸೇವಾ ಚಾರಿಟಬಲ್ ಟ್ರಸ್ಟ್ ಹಾಗೂ ಅಂಧರ ಸೇವಾ ಕಲಾತಂಡ ವತಿಯಿಂದ ಸುಗಮ ಸಂಗೀತ ಮತ್ತು ಆರ್ಕೆಸ್ಟ್ರಾ ಪ್ರದರ್ಶನ ಯಶಸ್ವಿಯಾಗಿ ನಡೆಯಿತು.**

ವಿಶೇಷ ವರದಿ

ದೇವದುರ್ಗ ತಾಲೂಕಿನ ಜಾಲಹಳ್ಳಿ ಗ್ರಾಮಕ್ಕೆ ಆಗಮಿಸಿದ್ದ ಈ ಕಲಾತಂಡದ ಎಲ್ಲಾ ಕಲಾವಿದರು ಹಾಸನ ಜಿಲ್ಲೆಯ ಅರಸಿಕೆರೆ ತಾಲೂಕಿನ ಹಾಲಹಳ್ಳಿ ಗ್ರಾಮದವರಾಗಿದ್ದಾರೆ. ಶ್ರೀ ಗುರು ಪುಟ್ಟರಾಜ ಗವಾಯಿಗಳು ಹಾಗೂ ಶ್ರೀ ಗುರು ಶಿವಕುಮಾರ ಸ್ವಾಮೀಜಿಗಳ ಆಶೀರ್ವಾದದೊಂದಿಗೆ ಆರಂಭಗೊಂಡಿರುವ ಬೆಂಗಳೂರಿನ ಶ್ರೀ ಮಾರುತಿ ಪ್ರಸನ್ನ ಅಂಧರ ಸೇವಾ ಚಾರಿಟಬಲ್ ಟ್ರಸ್ಟ್, ದೃಷ್ಟಿಹೀನರ ಬದುಕಿಗೆ ಆಶಾಕಿರಣವಾಗಿ ಕಾರ್ಯನಿರ್ವಹಿಸುತ್ತಿದೆ.

ಉಚಿತ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯಲ್ಲಿ ಸುಮಾರು 15 ರಿಂದ 20 ಮಂದಿ ಅಂಧ ವಿದ್ಯಾರ್ಥಿಗಳು ಆಶ್ರಯ ಪಡೆದಿದ್ದು, ಅವರಿಗೆ ಉಚಿತ ಊಟ, ವಸತಿ, ಸಂಗೀತ ಶಿಕ್ಷಣ,




ಕಂಪ್ಯೂಟರ್ ತರಬೇತಿ ಹಾಗೂ ಶಾಲಾ ಶಿಕ್ಷಣವನ್ನು ನೀಡಲಾಗುತ್ತಿದೆ.

ದಾನಿಗಳ ಸಹಕಾರದೊಂದಿಗೆ ನಡೆಯುತ್ತಿರುವ ಈ ಸಂಸ್ಥೆ, ವಿಶೇಷ ಚೇತನರು ಸಮಾಜದ ಮುಖ್ಯವಾಹಿನಿಗೆ ಬಂದು ಸ್ವಾವಲಂಬಿ ಜೀವನ ನಡೆಸಲು ನೆರವಾಗುತ್ತಿದೆ. ಸಾಂಸ್ಕೃತಿಕ ಕ್ಷೇತ್ರದಲ್ಲಿ ಅಂಧ ಕಲಾವಿದರ ಸಾಧನೆ ಪ್ರತಿಭೆಗೆ ಕಣ್ಣಿನ ದೃಷ್ಟಿ ಅಡ್ಡಿಯಲ್ಲ ಎಂಬುದನ್ನು ಈ ಕಲಾವಿದರು ಸಾಬೀತುಪಡಿಸಿದ್ದಾರೆ. ರಾಜ್ಯದ ವಿವಿಧ ಭಾಗಗಳಲ್ಲಿ ಸುಗಮ ಸಂಗೀತ, ಆರ್ಕೆಸ್ಟ್ರಾ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸುತ್ತಿರುವ ಇವರು ಮದುವೆ, ಗಣೇಶೋತ್ಸವ, ಶಾಲಾ–ಕಾಲೇಜು ವಾರ್ಷಿಕೋತ್ಸವ, ಗೃಹಪ್ರವೇಶ, ನಾಮಕರಣ ಹಾಗೂ ಜಾತ್ರಾ ಮಹೋತ್ಸವಗಳಂತಹ ವಿವಿಧ ಕಾರ್ಯಕ್ರಮಗಳಲ್ಲಿ ತಮ್ಮ ಕಲಾಪ್ರದರ್ಶನದ ಮೂಲಕ ಜನಮನ ಗೆದ್ದಿದ್ದಾರೆ.

ಸಾರ್ವಜನಿಕರಿಗೆ ಮನವಿ ಕಾರ್ಯಕ್ರಮದ ನೇತೃತ್ವ ವಹಿಸಿದ್ದ ಅಂಧ ಕಲಾವಿದ ಮಾರುತಿ ವಿ.ಸಿ. ಅವರು, "ಅಂ–ಧರ ಬಾಳಿಗೆ ನೀವು ಆಶಾಕಿರಣವಾಗಿರಿ" ಎಂಬ ಸಂದೇಶದೊಂದಿಗೆ ಸಾರ್ವಜನಿಕರು ತಮ್ಮ ಮನೆ ಮತ್ತು ಸಂಸ್ಥೆಗಳ ಶುಭ ಸಮಾರಂಭಗಳಿಗೆ ಅಂಧ ಕಲಾವಿದರನ್ನು ಆಹ್ವಾನಿಸಿ ಪ್ರೋತ್ಸಾಹಿಸಬೇಕೆಂದು ಮನವಿ ಮಾಡಿದರು.

ಗಣ್ಯರ ಅಭಿಪ್ರಾಯ ಕಾರ್ಯಕ್ರಮದಲ್ಲಿ ಮಾತನಾಡಿದ ಗ್ರಾಮ ಪಂಚಾಯಿತಿ ಸದಸ್ಯ ಅಬ್ದುಲ್ ರೆಹಮಾನ್ ಖುರೇಷಿ, "ಸ್ವಾಭಿಮಾನದಿಂದ ಬದುಕು ಕಟ್ಟಿಕೊಳ್ಳಲು ಅಂಗವೈಕಲ್ಯ ಅಡ್ಡಿಯಾಗುವುದಿಲ್ಲ ಎಂಬುದನ್ನು ಈ ಕಲಾವಿದರು ಸಾಬೀತುಪಡಿಸಿದ್ದಾರೆ. ಕಣ್ಣಿನ ದೃಷ್ಟಿ ಇಲ್ಲದಿದ್ದರೂ ತಮ್ಮ ಸುಮಧುರ ಕಂಠದ ಮೂಲಕ ಜನಮನ ಗೆದ್ದು ಸ್ವಾವಲಂಬಿ ಬದುಕು ನಡೆಸುತ್ತಿರುವ ಇವ–ರಿಗೆ ಅಭಿನಂದನೆಗಳು" ಎಂದು ಹೇಳಿದರು.

ಮುಖಂಡ ಹೈದರಾಲಿ ಕೊಪ್ಪರ್ ಮುಲ್ಲಾ ಮಾತನಾಡಿ, "ಸಂಗೀತ ಕಲೆಯ ಮೂಲಕ ಯಾರ ಮುಂದೆಯೂ ಕೈಚಾಚದೆ ಸ್ವಂತ ಬದುಕು ಕಟ್ಟಿಕೊಂಡಿರುವ ಈ ಕಲಾವಿದರು ಸಮಾಜಕ್ಕೆ ಮಾದರಿಯಾಗಿದ್ದಾರೆ. ಕಾಯಕವೇ ಕೈಲಾಸ ಎಂಬ ತತ್ವದೊಂದಿಗೆ ಬದುಕುತ್ತಿರುವ ಇವರ ಸಾಧನೆ ಎಲ್ಲರಿಗೂ ಪ್ರೇರಣೆಯಾಗಲಿ" ಎಂದು ಹೇಳಿದರು.

ಜನರಿಂದ ಧನಸಹಾಯ

ಜಾಲಹಳ್ಳಿ ಗ್ರಾಮದ ಗ್ರಾಮಸ್ಥರು, ವ್ಯಾಪಾರಸ್ಥರು ಹಾಗೂ ಸಂಗೀತಾಭಿಮಾನಿಗಳು ಕಾಣಿಕೆ ಡಬ್ಬಿಗೆ ದೇಣಿಗೆ ನೀಡುವ ಮೂಲಕ ಕಲಾವಿದರನ್ನು ಪ್ರೋತ್ಸಾಹಿಸಿದರು. ಅಂಬೇಡ್ಕರ್ ವೃತ್ತದಲ್ಲಿ ನಡೆದ ಕಾರ್ಯಕ್ರಮದಲ್ಲಿ ನೂರಾರು ಜನರು ಭಾಗವಹಿಸಿ ಕಲಾತಂಡದ ಪ್ರದರ್ಶನವನ್ನು ಮೆಚ್ಚಿದರು. ಹಾಜರಿದ್ದವರು ಗ್ರಾಮ ಪಂಚಾಯಿತಿ ಸದಸ್ಯ ಅಬ್ದುಲ್ ರೆಹಮಾನ್ ಖುರೇಷಿ, ಮುಖಂಡ ಹೈದರಲಿ ಮುಲ್ಲಾ, ಬಾಬಾ ಮೆಡಿಕಲ್,ಶಂಕರ್ ಖಾದರ್ ಭಾಷಾ ಸಾಲ್ಗುಂದ ಸಂಗೀತಾಭಿಮಾನಿಗಳು ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಕಲಾತಂಡದ ಸದಸ್ಯರು

ಶ್ರೀ ಮಾರುತಿ ಪ್ರಸನ್ನ ಅಂಧರ ಕಲಾತಂಡದ ನೇತೃತ್ವವನ್ನು ಮಾರುತಿ ವಿ.ಸಿ. ವಹಿಸಿದ್ದರು. ತಂಡದಲ್ಲಿ ಶಂಕರ್ ಕೆ.ಟಿ., ಆಯೇಷಾ, ಪ್ರದೀಪ್ ಹೊಸದುರ್ಗ, ಮಹೇಶ್ ಜೆ., ಮಂಜುಳಾ ಎಸ್. ಸೇರಿದಂತೆ ಹಲವಾರು ಅಂಧ ಕಲಾವಿದರು ಭಾಗವಹಿಸಿದ್ದರು.

ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

## ನೇಮಕಾತಿ ಪ್ರಕಟಣೆ

### KEA ನೇಮಕಾತಿ 2026 ? 945 ಕೃಷಿ ಅಧಿಕಾರಿ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಜೂನ್ 21, 2026

ಏಇಂ ನೇಮಕಾತಿ 2026: 945 ಕೃಷಿ ಅಧಿಕಾರಿ (AO), ಸಹಾಯಕ ಕೃಷಿ ಅಧಿಕಾರಿ (AAO) ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ಪರೀಕ್ಷಾ ಪ್ರಾಧಿಕಾರ (KEA) ಏಪ್ರಿಲ್ 2026 ರ ಅಧಿಕೃತ ಅಧಿಸೂಚನೆಯ ಮೂಲಕ ಕರ್ನಾಟಕ ಕೃಷಿ ಇಲಾಖೆ, ಕೃಷಿ ಅಧಿಕಾರಿ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ (30 ಮೇ 2026). ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 20–ಜೂನ್–2026 25 ಜೂನ್ 2026 ರಂದು ಅಥ–ವಾ ಅದಕ್ಕೂ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು.ಕನ್ನಡ ಪರೀಕ್ಷೆ ಪತ್ರಿಕೆ–1: 25ನೇ ಜುಲೈ 2026 10:30 ರಿಂದ 12:30 ರವರೆಗೆ ಕನ್ನಡ ಪರೀಕ್ಷೆ ಪತ್ರಿಕೆ–2: 25ನೇ ಜುಲೈ 2026 2:30 ರಿಂದ 4:30 ರವರೆಗೆ ಅಧಿಕೃತ ವೆಬ್‌ಸೈಟ್: cetonline.karnataka.gov.in

## ಮಸ್ಕಿಯಲ್ಲಿ ಕುಡಿಯುವ ನೀರಿನ 44 ಕೋಟಿ ಪೈಪ್ ಲೈನ್ಕಾ ಮಗಾರಿ ಅರೆ ಬರೆ– ಕರವೇ ಅಧ್ಯಕ್ಷ ದುರ್ಗಾರಾಜ ಆರೋಪ

**ಮಸ್ಕಿ.:ಪುರಸಭೆ ವ್ಯಾಪ್ತಿಯಲ್ಲಿ ವಿವಿಧ ವಾರ್ಡ್ ಗಳಿಗೆ ಕುಡಿಯುವ ನೀರು ಪೂರೈಸುವ 44 ಕೋಟಿ ವೆಚ್ಚದ ಅಮೃತ– 2–0 ಯೋಜನೆ ಕಾಮಗಾರಿ ಅರೆ ಬರೆಯಾಗಿದೆ ಎಂದು ಕರವೇ ತಾಲೂಕು ಅಧ್ಯಕ್ಷ ದುರ್ಗರಾಜ ವಟಗಲ್ ಆರೋಪಿಸಿದರು. ಮಸ್ಕಿ ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು,**

ಅಂದಾಜು 44 ಕೋಟಿ ವೆಚ್ಚದ ಪೈಪ್ ಲೈನ್ ಕಾಮಗಾರಿ ಅರೆ ಬರೆ ಯಾಗಿದ್ದರೂ ಯಾರೂ ಗಮನ ಹರಿಸುತ್ತಿಲ್ಲ ಎಂಜಿನಿಯರ್ ಗಳು ಕಾಮಗಾರಿ ಸ್ಥಳಕ್ಕೆ ಕಾಟಾಚಾರಕ್ಕೆ ಭೇಟಿ ನೀಡುತ್ತಿದ್ದಾರೆ ಎಂದು ದೂರಿದರು. ಇಲ್ಲಿಯ ವಿವಿಧ ವಾಡ್ 9 ಗಳಲ್ಲಿ ಪೈಪ್ ಲೈನ್ ಅಳವಡಿಕೆಗೆ ಅಗೆದಿದ್ದ ಗುಂಡಿ ಗಳನ್ನು ಭದ್ರ ಪಡಿಸಿಲ್ಲ ಇತ್ತೀಚಿಗೆ ರಸ್ತೆಗೆ ಅಳವಡಿಸಿದ್ದ ಇಂಟರ್ ಲಾಕ್ ಗಳು ಹಾಳಾಗಿರುವ ಕಾರಣ ವಾಹನ ಸಂಚಾರಕ್ಕೆ ತೊಂದರೆ ಯಾಗುತ್ತಿದೆ ಎಂದರು. ಸಂಬಂಧ ಪಟ್ಟ ಎಂಜಿನಿಯರ್ ಗಳು ಗಮನ ಹರಿಸಿ ನಿಗದಿತ ಅವಧಿ ಒಳಗೆ ಕಾಮಗಾರಿಪೂರ್ಣ ಗೊಳಿಸದ ಗುತ್ತಿಗೆ ದಾರನಿಗೆ ಕಪ್ಪು ಪಟ್ಟಿಯಲ್ಲಿ ಸೇರಿಸ ಬೇಕು ಎಂದು ಆಗ್ರಹಿಸಿದರು. ಈ ಸಂದರ್ಭದಲ್ಲಿಕ ಮುಖಂಡರಾದ ನೂರ್ ಮಹದ್, ವೀರ ಭದ್ರ ಕೊಠಾರಿ, ಅಯ್ಯಪ್ಪ, ಮರಿಯಪ್ಪ ಸೇರಿದಂತೆ ಇನ್ನಿತರರು ಇದ್ದರು

## ಕಂಪ್ಲಿ, ಸಣಾಪುರ, ಬೆಳಗೋಡ್‌ಹಾಳ್ ವಿಜಯನಗರ ಕಾಲುವೆ ಹೂಳು ತೆರವು

**ಬಳ್ಳಾರಿ / ಕಂಪ್ಲಿ : ಪಟ್ಟಣ ಸೇರಿದಂತೆ ತಾಲೂಕಿನ ಸಣಾಪುರ, ಬೆಳಗೋಡ್‌ಹಾಳ್ ಗ್ರಾಮದ ವಿಜಯನಗರ ಕಾಲುವೆಗಳಲ್ಲಿ ತುಂಬಿಕೊಂಡಿದ್ದ ಹೂಳನ್ನು ನೀರು ಬಳಕೆದಾರರ ಸಂಘದಿಂದ ತೆರವುಗೊಳಿಸಲಾಗಿತು.**



ನಂತರ ಸಣಾಪುರ ನೀರು ಬಳಕೆದಾರರ ಸಹಕಾರ ಸಂಘದ ಅಧ್ಯಕ್ಷ ಕೆ.ಎಸ್.ದೊಡ್ಡಬಸಪ್ಪ ಮಾತನಾಡಿ, ಈಗಾಗಲೇ ಪಟ್ಟಣ, ಸಣಾಪುರ, ಬೆಳಗೋಡ್‌ಹಾಳ್ ಗ್ರಾಮದಲ್ಲಿ ಹಾದು ಹೋಗಿರುವ ವಿಜಯನಗರ ಕಾಲುವೆಗಳಲ್ಲಿ ಘನತ್ಯಾಜ್ಯ ತುಂಬಿಕೊಂಡ ಪರಿಣಾಮ ಹೂಳು, ಜಲಸಸ್ಯದಿಂದ ನೀರು ಸರಾಗವಾಗಿ ಹ–ರಿಯದಂತೆ ಆಗಿದೆ. ಇದರಿಂದ ಈ ಭಾಗದ ಸಾಕಷ್ಟು ರೈತರಿಗೆ ತುಂಬ ಸಮಸ್ಯೆ ಉಂಟಾಗಿದೆ. ರೈತರು ಬದುಕು ಹಸನಾಗಬೇಕಾದರೆ, ಸಮೃದ್ಧ ಬೆಳೆಯಿಂದ ಮಾತ್ರ. ಆದರೆ, ನೀರು ಇಲ್ಲದೇ ಇದ್ದರೆ, ಬೆಳೆ ಬೆಳೆಯುವದಾದರು ಹೇಗೆ? ಸ್ವಾಮಿ. ಅಧಿಕಾರಿಗಳು ಹೂಳೆತ್ತಲು ಮುಂದಾಗದಿರುವ ಹಿನ್ನಲೆ ಸ್ವತಹ: ರೈತರು ಸ್ವಯಂ ಪ್ರೇರಿತವಾಗಿ ನೀರು ಬಳಕೆದಾರರ ಸಂಘದಿಂದ ಕಾಲುವೆಯಲ್ಲಿನ ಹೂಳು ತೆಗೆಸಲಾಯಿತು.

ಎರಡನೇ ಬೆಳೆಗೆ ನೀರು ಇಲ್ಲದ ಪರಿಣಾಮ ಈಗಾಗಲೇ ರೈತರು ಬದುಕು ಸಂಕಷ್ಟಕ್ಕೆ ಸಿಲುಕಿದೆ. ಈಗ ಮುಂಗಾರು ಆರಂಭದ ಹಿನ್ನಲೆ ಬೆಳೆ ಬೆಳೆಯಲು ನೀರಿನ ಅವಶ್ಯಕತೆ ಇದೆ. ಆದ್ದ–ರಿಂದ ಕಾಲುವೆ ಮೂಲಕ ನೀರು ಹರಿಸಿಕೊಳ್ಳಲು ಕಾಲುವೆಯಲ್ಲಿ ಹೂಳನ್ನು ಮೊದಲು ತೆಗೆದುಕೊಳ್ಳಬೇಕಾಗಿದೆ. ಆದ್ದರಿಂದ ಸ್ವತ: ರೈತರಾದ ನಾವು ಹೂಳು ತೆಗೆಸಿಕೊಳ್ಳುತ್ತಿದ್ದೇವೆ ಎಂದರು. ಈ ಸಂದರ್ಭದಲ್ಲಿ ಕಂಪ್ಲಿ ನೀರು ಬಳಕೆದಾರರ ಸಹಕಾರ ಸಂಘದ ಉಪಾಧ್ಯಕ್ಷ ಟಿ.ಗಂಗಣ್ಣ, ಕಾರ್ಯದರ್ಶಿ ಅಶೋಕ, ಗೋಂದಿ ಮಂಜುನಾಥ,ರೈತರಾದ ವಿರುಪಾಕ್ಷಿ,ಬಸವರಾಜ ಸೇರಿದಂತೆ ರೈತರಿದ್ದರು. ವರದಿ : ಜಿಲಾನಸಾಬ್ ಬಡಿಗೇರ್

# ನವಲಗುಂದದ ಯುವಕನ "ಫಸ್ಟ್ ಸೈಟ್ " ಆಲ್ಬಮ್ ಸಾಂಗ್ ಭರ್ಜರಿ ಸದ್ದು

❑ ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಮೂಲತಃ ನವಲಗುಂದದ ಗ್ರಾಮೀಣ ಭಾಗದ ಯುವಕ ರಘುವೀರ ಹೆಬ್ಬಾರ್ ಬೆಂಗಳೂರಿನಲ್ಲಿ ಸಾಫ್ಟ್ವೇರ್ ಇಂಜಿನಿಯರ್ ಆಗಿ ಕಾರ್ಯನಿರ್ವಹಿಸುತ್ತಿದ್ದು ಇದೀಗ "ಫಸ್ಟ್ ಸೈಟ್" ಎಂಬ ಆಲ್ಬಮ್ ಸಾಂಗ್ ಮೂಲಕ ಎಲ್ಲಡೆ ಮನೆಮಾತಾಗಿದ್ದಾರೆ.**

ತಮ್ಮ ಬಿಡುವಿನ ದಿನಗಳಲ್ಲಿ ಹಾಡುಗಳ ರಚನೆ ಹಾಗೂ ತಮ್ಮ ಹಾಡಿಗೆ ತಾವೇ ಮ್ಯೂಸಿಕ್ ಕಂಪೋಸ್ ಮಾಡುವ ಆಸಕ್ತಿಯುಳ್ಳ ಇವರು ತಮ್ಮದೇ ಒಂದು ಆಲ್ಬಮ್ ಸಾಂಗ್ ಮಾಡಬೇಕೆಂದು ಕನಸು ಕಂಡರು. ಇವರ ಕನಸಿಗೆ ಜೊತೆಗಿರುವ ಸ್ನೇಹಿತರು ಕೈಜೋಡಿಸಿದರು. ಯೋಗೇಶ್ ರಾವ್ ನಿರ್ದೇಶನಕ್ಕೆ ಇಳಿದರು. ರಾಹುಲ್ ಠಾಕೂರ್ ತಮ್ಮ ಕ್ಯಾಮೆರಾ ಕೈಚಳಕ ತೋರಿದರು. ತಾಂತ್ರಿಕ ವರ್ಗದಲ್ಲಿ ಅಮಿತ್,ಶಂಕರ್, ದೀಪಕ್ ಒಳಗೊಂಡ ತಂಡ ಕಟ್ಟಿಕೊಂಡು ನಿರ್ಮಿಸಿದ್ದೇ "ಫಸ್ಟ್ ಸೈಟ್ " ಎಂಬ ಆಲ್ಬಮ್ ಸಾಂಗ್.

ಈ ಹಾಡಿನಲ್ಲಿ ಇದೀಗ ಚಿತ್ರರಂಗಕ್ಕೆ ಕಾಲಿಟ್ಟ ವಿದ್ಯಾಶ್ರೀ ಹಾಗೂ ಕಾರ್ತಿಕ ಗೌಡ ಉತ್ತಮವಾಗಿ ಅಭಿನಯಿಸಿದರು. ಇದಕ್ಕೆಲ್ಲ ಬೆನ್ನೆಲುಬಾಗಿ ನಿಂತವರು ಚಿತ್ರರಂಗದ ಚಲನಚಿತ್ರ



ಪತ್ರಕರ್ತರು, ಪಿ.ಆರ್.ಓ ಡಾ.ಪ್ರಭು ಗಂಜಿಹಾಳ, ಡಾ.ವೀರೇಶ್ ಹಂಡಿಗಿ ಅವರು. ಈಗಾಗಲೇ ಬಿಡುಗಡೆಗೊಂಡ ಈ ಹಾಡು 'ರಾಗ ರಶ್' ಎಂಬ ಯುಟ್ಯೂಬ್‌ನಲ್ಲಿ ಭರ್ಜರಿ ಸದ್ದು ಮಾಡಿ ಎಲ್ಲರ ಗಮನ ಸೆಳೆದಿದೆ. ಹೊಸಬರ ಮೊದಲ ಪ್ರಯತ್ನಕ್ಕೆ ಇಷ್ಟು ಪ್ರೋತ್ಸಾಹ ಸಿಕ್ಕಿದ್ದಕ್ಕೆ ತಂಡ ಬಹಳಷ್ಟು ಖುಷಿ ಆಗಿದ್ದು ಮತ್ತೊಂದು ಹೊಸ ಪ್ರಯತ್ನಕ್ಕೆ ಕೈಜೋಡಿಸಲು ಕಾರಣವಾಗಿದೆ.

ಈ ಹಾಡುಗಳಿಗೆ ಹಿರಿಯ ಚಿತ್ರ ಸಾಹಿತಿ, ನಿರ್ದೇಶಕರು, ಸಿನಿ ಪತ್ರಕರ್ತರಾದ ಹಿರಿಯೂರು ರಾಘವೇಂದ್ರ, ಚಿತ್ರ ನಿರ್ದೇಶಕ ಬಿ.ಎ. ಪುರುಷೋತ್ತಮ ಓಂಕಾರ ಸ್ವಾಮಿ, ಹಿಟ್ ಧಾರಾವಾಹಿಗಳ ನಿರ್ದೇಶಕ ಪೃಥ್ವಿರಾಜ್ ಕುಲಕರ್ಣಿ ಹಾಗೂ ಚಲನಚಿತ್ರ ಮತ್ತು ಕಿರುತೆರೆ ಕಲಾವಿದೆ ಸುನಂದಾ ಕಲ್ಬುರ್ಗಿ ಅಲ್ಲದೆ ಹಲವರು ಹಾಡು ಮೆಚ್ಚಿ ವಿಡಿಯೋಗಳ ಮೂಲಕ ತಂಡಕ್ಕೆ ಶುಭ ಹಾರೈಸಿದ್ದಾರೆ. ಈ ಹಾಡಿನ ಚಿತ್ರೀಕರಣ ಬೆಂಗಳೂರಿನ ನಂದಿ ಸಿಟಾ ಡಲ್ ಹಾಗೂ ಸುತ್ತಮುತ್ತ ನಡೆದಿದೆ.

ನಿತ್ಯದ ಕೆಲಸದಲ್ಲಿ ಒಂದಷ್ಟು ಬಿಡುವಿದ್ದಾಗ ಹಾಡು ಕೇಳುವ ಹವ್ಯಾಸ ಇತ್ತು. ಹಾಗೆಯೇ ಬರೆಯಲು ಶುರು ಮಾಡಿ ಮ್ಯೂಸಿಕ್ ಮಾಡುವುದನ್ನು ಕಲಿತೆ. ಆದರೆ ನನ್ನ ಹಾಡಿನಲ್ಲಿ ಎಂತಹ ಶಕ್ತಿ ಇದೆ ಎಂದು ಆತ್ಮೀಯರು ಹಾಗೂ ಕುಟುಂಬದವರು ಕೇಳಿ ಮೆಚ್ಚುಗೆ ವ್ಯಕ್ತಪಡಿಸಿದಾಗಲೆ ಗೊತ್ತಾಯಿತು. ಹೀಗಾಗಿ ಹಾಡಿನ ಆಲ್ಬಮ್‌ಗಳನ್ನು ಇನ್ನಷ್ಟು ಮಾಡಬೇಕು ಎಂಬ ಉತ್ಸಾಹ ನನಗೂ, ನಮ್ಮ ತಂಡಕ್ಕೂ ಬಂದಿದೆ ಎಂದು ರಘುವೀರ್ ಹೇಳುತ್ತಾರೆ. ಒಟ್ಟಿನಲ್ಲಿ ಸಾಫ್ಟವೇರ ಉದ್ಯೋಗಿ ಮುಂದಿನ ದಿನಗಳಲ್ಲಿ ಹೊಸಪ್ರಯೋಗಗಳ ಮೂಲಕ ಸಂಗೀತಕ್ಷೇತ್ರದಲ್ಲಿ ಗುರುತಿಸುವಂತಾಗಲಿ ಎಂದು ಶುಭ ಹಾರೈಸೋಣ.

_ಡಾ.ಪ್ರಭು ಗಂಜಿಹಾಳ

# ಸ್ವಚ್ಛ ಪರಿಸರ, ಸೊಳ್ಳೆ ರಹಿತ ಮನೆ ? ಡೆಂಗ್ಯೂ ಮುಕ್ತ ಸಮಾಜ ನಿರ್ಮಾಣ



❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಜಿಲ್ಲಾ ಆಡಳಿತ ಜಿಲ್ಲಾ ಪಂಚಾಯತ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಜಿಲ್ಲಾ ಆಶ್ರಿತ ರೋಗಗಳ ನಿಯಂತ್ರಣ ವಿಭಾಗ ರಾಯಚೂರು ಪ್ರಾಥಮಿಕ ಆರೋಗ್ಯ ಕೇಂದ್ರ ಜವಳಗೇರಾ ಸರಕಾರಿ ಪ್ರೌಢಶಾಲೆ ಜವಳಗೇರಾ ಇವರ ಸಂಯುಕ್ತ ಆಶ್ರಯದಲ್ಲಿ ಡೆಂಗ್ಯೂ ಜ್ವರ ತಡೆಗಟ್ಟಲು ಮುಂಜಾಗ್ರತೆ ಕ್ರಮಗಳ ಕುರಿತು ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.**

ನಂತರ ಡೆಂಗ್ಯೂ ಜ್ವರ ತಡೆಗಟ್ಟಲು ಮುನ್ನೆಚ್ಚರಿಕೆಗಳ ಕ್ರಮಗಳ ಕುರಿತು ಮಾತನಾಡಿದ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಬಾಲಪ್ಪ ನಾಯಕ ಅವರು ಡೆಂಗ್ಯೂ ಎಂಬುದು ಡೆಂಗ್ಯೂ ಜ್ವರ ರೋಗವಾಗಿದ್ದು, ಸೋಂಕಿತ ಈಡೀಸ್ ಸೊಳ್ಳೆಗಳ ಕಚ್ಚುವಿಕೆಯಿಂದ ಹರಡುತ್ತದೆ. ಮಳೆಗಾಲದಲ್ಲಿ ಇದರ ಅಪಾಯ ಹೆಚ್ಚಾಗಿರುತ್ತದೆ.ಡೆಂಗ್ಯೂಗೆ ವಿಶೇಷ ಔಷಧಿ ಇಲ್ಲದಿದ್ದರೂ, ಬೇಗ ಗುರುತಿಸಿ ಸರಿಯಾದ ಚಿಕಿತ್ಸೆ ಪಡೆದರೆ ಹೆಚ್ಚಿನವರು ಸಂಪೂರ್ಣವಾಗಿ ಚೇತ–ರಿಸಿಕೊಳ್ಳುತ್ತಾರೆ. ಸೊಳ್ಳೆಗಳ ಉತ್ಪತ್ತಿಯನ್ನು ತಡೆಯುವುದು ಡೆಂಗ್ಯೂ ನಿಯಂತ್ರಣದ ಅತ್ಯುತ್ತಮ ಮಾರ್ಗವಾಗಿದೆ ಎಂದರು ತಿಳಿಸಿದರು,

ನಂತರ ಮಾತನಾಡಿದ ಆರೋಗ್ಯ ನಿರೀಕ್ಷಣಾಧಿಕಾರಿಳಾದ ಅಂಬಮ್ಮ ಅವರು ಡೆಂಗ್ಯೂ ಜ್ವರದ ಲಕ್ಷಣಗಳಾದ ಹೆಚ್ಚಿನ ಜ್ವರ ತೀವ್ರ ತಲೆನೋವು ಕಣ್ಣುಗಳ ಹಿಂದೆ ನೋವು ಸ್ನಾಯು ಮತ್ತು ಸಂಧಿ ನೋವು. ವಾಂತಿ ಅಥವಾ ವಾಕರಿಕೆ ಚರ್ಮದ ಮೇಲೆ ಕೆಂಪು ಚುಕ್ಕೆಗಳು ತೀವ್ರ ಸಂದರ್ಭಗಳಲ್ಲಿ ರಕ್ತಸ್ರಾವ. ಕಂಡುಬರುವ ಸಾಧ್ಯತೆ ಹೆಚ್ಚು ಇಂತಹ ಲಕ್ಷಣಗಳು ಕಂಡು ಬಂದರೆ ಕೂಡಲೇ ಹತ್ತಿರದ ಆಸ್ಪತ್ರೆಯಲ್ಲಿ ತಪಾಸಣೆ ಮಾಡಿಸಿಕೊಳ್ಳಿ. ಡೆಂಗ್ಯೂ ಜ್ವರದ ಮುಂಜಾಗ್ರತಾ. ಈ ಕ್ರಮಗಳನ್ನು. ಮನೆಯ ಸುತ್ತಮುತ್ತ ನೀರು ನಿಲ್ಲದಂತೆ ನೋಡಿಕೊಳ್ಳಿ.ನೀರಿನ ಟ್ಯಾಂಕ್‌ಗಳು, ಡ್ರಮ್‌ಗಳು ಮತ್ತು ಪಾತ್ರೆಗಳನ್ನು ಮುಚ್ಚಿಡಿ. ವಾರಕ್ಕೊಮ್ಮೆ ನೀರು ಸಂಗ್ರಹಿಸುವ ಪಾತ್ರೆಗಳನ್ನು ಸ್ವಚ್ಛಗೊಳಿಸಿ.ಸೊಳ್ಳೆ ಜಾಲರಿ, ಸೊಳ್ಳೆ ನಿವಾರಕ ಕ್ರೀಮ್ ಅಥವಾ ಸ್ಪ್ರೇ ಬಳಸಿ.ಪೂರ್ಣ ತೋಳುಗಳ ಬಟ್ಟೆ ಧರಿಸಿ. ಕೈಗೊಳ್ಳಬೇಕಾದದ್ದು ಅಗತ್ಯವಿದೆ ಎಂದರು. ಈ ಸಂದರ್ಭದಲ್ಲಿ ಸರಕಾರಿ ಪ್ರೌಢಶಾಲೆ ಮುಖ್ಯ ಗುರುಗಳಾದ ಜಿ.ಎಸ್ ಪಾಟೀಲ್. ಶಿಕ್ಷಕರಾದ ಬಸ್ಸಮ್ಮ .ಸೌಮ್ಯ .ಸುಧಾ ಉಮಾದೇವಿ. ಗಿರಿಜಾ. ಮಂಜುಳಾ.ಉಷಾ. ಪ್ರೀಯಾ. ಲತಾ. ವಿದ್ಯಾರ್ಥಿಗಳು ಉಪಸ್ಥಿತರಿದ್ದರು

# ಕೆ. ಶಿವನಗೌಡ ನಾಯಕರ 49ನೇ ಹುಟ್ಟುಹಬ್ಬಕ್ಕೆ ನಾಗಡದಿನ್ನಿಯಲ್ಲಿ ಆಹ್ವಾನ ಪತ್ರಿಕೆ ಬಿಡುಗಡೆ

## ಸಮಾಗಮ ಕಾರ್ಯಕ್ರಮ ಭವಿಷ್ಯದ ರೂಪುರೇಷೆ ಸಿದ್ದಪಡಿಸುವ ವೇದಿಕೆ– ಶರಣಪ್ಪ ಸಾಹುಕಾರ

❑ ನೈಜ್ಯ ದೆಸೆ ನ್ಯೂಸ್

**ಅರಕೇರಾ : ಕಲ್ಯಾಣ ಕರ್ನಾಟಕದ ರಾಯಚೂರು ಜಿಲ್ಲೆಯಲ್ಲಿ ಶಿಕ್ಷಣ, ಆರೋಗ್ಯ, ಕೃಷಿ,ನೀರಾವರಿ ಸೌಲಭ್ಯ ಸೇರಿದಂತೆ ಯುವಕರಿಗೆ ಉದ್ಯೋಗ ಸೃಷ್ಟಿಗೆ ಹೆಚ್ಚಿನ ಒತ್ತು ನೀಡುವುದಕ್ಕೆ ಸಂಕಲ್ಪ ಸಮಾಗಮ ಕಾರ್ಯಕ್ರಮ ಭವಿಷ್ಯ ರೂಪಿಸುವ ವೇದಿಕೆಯಾಗಲಿದೆ ಎಂದು ಅರಕೇರಾ ತಾಲೂಕ ಕೆಎಸ್ ಎನ್ ಸೇವಾ ಸಮಿತಿಯ ತಾಲೂಕ ಅಧ್ಯಕ್ಷ ಶರಣಪ್ಪ ಸಾಹುಕಾರ ಹೇಳಿದರು.**

ಅವರು ಅರಕೇರಾ ತಾಲೂಕಿನ ನಾಗಡದಿನ್ನಿ ಗ್ರಾಮದಲ್ಲಿ ಕೆ.ಎಸ್.ಎನ್. ಸೇವಾ ಸಮಿತಿ



ಸಹಯೋಗದಲ್ಲಿ ಜುಲೈ 14ರಂದು ಕವಿತಾಳದಲ್ಲಿ ನಡೆಯಲಿರುವ ಕೆ. ಶಿವನಗೌಡ ನಾಯಕರ 49ನೇ ಹುಟ್ಟು ಹಬ್ಬದ ಅಂಗವಾಗಿ ಸಂಕಲ್ಪ ಸಮಾಗಮದ ಆಹ್ವಾನ ಪತ್ರಿಕೆ ವಿತರಿಸಿ ಮಾತನಾಡುತ್ತಾ. ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಗೆ ಸಂಕಲ್ಪ ಸಮಾ ಗಮ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು ಯಶಸ್ವಿಗೆ ಸರ್ವರ ಸಹಕಾರ ಬಹು ಮುಖ್ಯವಾಗಿದೆ ಎಂದರು. ಮುಖಂಡರಾದ ನಂದಪ್ಪ ನಾಯಕ, ಅಮರಪ್ಪ ಬಾಡಲ್, ಮೌನೇಶ ನಾಯಕ, ವೆಂಕನಗೌಡ, ಅಯ್ಯನಗೌಡ ನಾಯಕ,ಟಿ.ಶರಣಬಸವ ನಾಯಕ,ಆಂಜನೇಯ ಹೆಗ್ಗಡದಿನ್ನಿ,ಟಿ. ಶ್ರೀನಿವಾಸ,ಬಸನಗೌಡ, ಜೆ ಈಶಪ್ಪ ಗೌಡ. ಅರುಣ್ ಕುಮಾರ ಬಾಡಲ್, ಪಂಪಣ್ಣ ಯರಮರ ಸು.ಮರಿಯಪ್ಪ ಸೇರಿದಂತೆ ಇನ್ನಿತರರು ಇದ್ದರು.

# 27 ವಸಂತಗಳನ್ನು ಪೂರೈಸಿದ ಸುಜಾತ ಚನ್ನಬಸ್ಸಯ್ಯ ಸ್ವಾಮಿ ಹಿರೇಮಠ್ ದಂಪತಿಯ ಕಾರುಣ್ಯ ಯಾತ್ರೆ

❑ ನೈಜ್ಯ ದೆಸೆ ನ್ಯೂಸ್

**"ಕೈಲಾದಷ್ಟು ಸಹಾಯ ಮಾಡು, ಕೈಲಾಗದಿದ್ದರೆ ಸಹಾಯ ಮಾಡುವವರಿಗೆ ಅಡ್ಡಿ ಬರಬೇಡ" ಎಂಬ ಮಾತಿಗೆ ಜೀವಂತ ಸಾಕ್ಷಿಯಾಗಿ ನಿಂತಿ–ದ್ದಾರೆ ಶ್ರೀಮತಿ ಸುಜಾತ ಮತ್ತು ಶ್ರೀ ಚನ್ನಬಸಯ್ಯ ಸ್ವಾಮಿ ಹಿರೇಮಠ್ ದಂಪತಿಗಳು. ಇಂದು ತಮ್ಮ 27ನೇ ವಿವಾಹ ವಾರ್ಷಿಕೋತ್ಸವದ ಸಂಭ್ರಮದಲ್ಲಿರುವ ಈ ದಂಪತಿಗಳು, ಕಳೆದ 9 ವರ್ಷಗಳಿಂದ 'ಕಾರುಣ್ಯ ಆಶ್ರಮ'ದ ಮೂಲಕ ನೂರಾರು ಅಶಕ್ತರ ಬಾಳಿಗೆ ಆಸರೆಯಾಗಿದ್ದಾರೆ.**

ಒಂದೇ ನಾಣ್ಯದ ಎರಡು ಮುಖಗಳು 1998ರಲ್ಲಿ ದಾಂಪತ್ಯ ಜೀವನಕ್ಕೆ ಕಾಲಿಟ್ಟ ಈ ಜೋಡಿ, ಸಂಸಾರದ ಜವಾಬ್ದಾರಿಗಳ ಜೊತೆಗೆ ಸಮಾಜದ ಋಣ ತೀರಿಸುವ ಸಂಕಲ್ಪವನ್ನೂ ಮಾಡಿಕೊಂಡಿತ್ತು. ಮದುವೆಯ ಮೊದಲ ದಿನದಿಂದಲೇ ಅವರ ಮನೆಯಲ್ಲಿ ಅನ್ನದಾನ, ವಸ್ತ್ರದಾನ ನಿತ್ಯಕರ್ಮವಾಗಿ–ತ್ತು. ಈ ಸೇವಾ ಮನೋಭಾವವೇ ಮುಂದೆ 'ಕಾರುಣ್ಯ ಆಶ್ರಮ' ಸ್ಥಾಪನೆಗೆ ನಾಂದಿ ಹಾಡಿತು. 'ಕಾರುಣ್ಯ ಆಶ್ರಮ' – 9 ವರ್ಷದ ಸೇವಾ ಪರ್ವ ಸುಮಾರು 9 ವರ್ಷಗಳ ಹಿಂದೆ, ನಿರ್ಗತಿ–ಕರು, ಅನಾಥ ವೃದ್ಧರು, ಅಂಗವಿಕಲರು ಮತ್ತು ಮಾನಸಿಕ ಅಸ್ವಸ್ಥರಿಗಾಗಿ ಈ ದಂಪತಿಗಳು 'ಕಾರುಣ್ಯ ಆಶ್ರಮ'ವನ್ನು ಆರಂಭಿಸಿದರು.

ಇಂದು ಈ ಆಶ್ರಮ ಹಲವ–ರಿಗೆ ತವರು ಮನೆಯಾಗಿದೆ.

"ನಿರ್ಗತಿಕರಿಗೆ, ಅಶಕ್ತರಿಗೆ, ವೃದ್ಧರಿಗೆ



ಆಸರೆಯಾಗಿ" ಎಂಬ ಧ್ಯೇಯವಾಕ್ಯದೊಂದಿಗೆ ಈ ದಂಪತಿಗಳು ದಿನದ 24 ಗಂಟೆಯೂ ಸೇವೆಗೆ ತಮ್ಮನ್ನು ಅರ್ಪಿಸಿಕೊಂಡಿದ್ದಾರೆ. ಹಬ್ಬ–ಹ–ರಿದಿನ, ಜಯಂತಿ–ವರ್ಧಂತಿ ಎನ್ನದೆ ಪ್ರತಿದಿನವೂ ಇಲ್ಲಿನ ನಿವಾಸಿಗಳೇ ಇವರ ಕುಟುಂಬ. ಸೇವಾಕರ್ತ ದಂಪತಿಯ ಬದುಕಿನ ಸಿದ್ಧಾಂತ ಶ್ರೀ ಚನ್ನಬಸಯ್ಯ ಸ್ವಾಮಿ ಅವರು ಹೇಳುವಂತೆ, "ನಮ್ಮ ಮದುವೆಯ ವಾರ್ಷಿಕೋತ್ಸವ ಎಂದರೆ ನಮಗೆ ಇನ್ನೊಂದು ವರ್ಷ ಸೇವೆ ಮಾಡಲು ದೇವರು ಅವಕಾಶ ಕೊಟ್ಟ ದಿನ".

ಶ್ರೀಮತಿ ಸುಜಾತ ಅವರು ಆಶ್ರಮದ ತಾಯಿಯಾಗಿ ಎಲ್ಲರ ಯೋಗಕ್ಷೇಮ ನೋಡಿಕೊಳ್ಳುತ್ತಾರೆ. ಅಡುಗೆಯಿಂದ ಹಿಡಿದು ಸ್ವಚ್ಛತೆ, ಆರೈಕೆಯವರೆಗೆ ಎಲ್ಲದರಲ್ಲೂ ಅವರ ಶ್ರದ್ಧೆ ಇದೆ ಎಂದರು. ಕಷ್ಟ–ಸುಖದಲ್ಲಿ ಜೊತೆಯಾದವರು 27 ವರ್ಷದ ದಾಂಪತ್ಯದಲ್ಲಿ ಬಂದ ಕಷ್ಟಗಳನ್ನು ಇವರು ಸೇವೆಯ ಮೂಲಕವೇ ಮೆಟ್ಟಿ ನಿಂತಿದ್ದಾರೆ. ಆರ್ಥಿಕ ಮುಗ್ಗಟ್ಟು ಎದುರಾದಾಗಲೂ ಆಶ್ರಮದ ಬಾಗಿಲು ಮುಚ್ಚಲಿಲ್ಲ. "ಹಸಿದವರಿಗೆ ಅನ್ನ ಕೊಡುವಾಗ ನಮ್ಮ ಮನೆ ಖಾಲಿಯಾಗಿದ್ದರೂ ಚಿಂತಿಲ್ಲ" ಎಂಬುದು ಇವರ ನಿಲುವು. ಇವರ ಈ ತ್ಯಾಗ, ನಿಸ್ವಾರ್ಥ ಸೇವೆಗೆ ಇಡೀ ಸಮಾಜವೇ ತಲೆಬಾಗಿದೆ.

ಹಿರೇಮಠ ಕುಟುಂಬದ ಹಿರಿಯರಾದ ಅಮರಯ್ಯ ಸ್ವಾಮಿಯವರ ಹೆಜ್ಜೆಗುರುತುಗಳನ್ನು ಅನುಸರಿಸಿ ಶ್ರೀಮತಿ ಸುಜಾತ ಚನ್ನಬಸ್ಸಯ್ಯ ಅವರು 5 ವರ್ಷಗಳ ಕಾಲ ಗ್ರಾಮ ಪಂಚಾಯತ್ ಸದಸ್ಯೆಯಾಗಿದ್ದರು. ಆ ಅವಧಿಯಲ್ಲಿ ಗ್ರಾಮೀಣ ಭಾಗದಲ್ಲಿ ಸಾಕ್ಷರತೆಯ ಕ್ರಾಂತಿಯನ್ನೇ ಮಾಡಿದ ಕೀರ್ತಿ ಅವರದು.ಪಂಚಾಯತ್ ಸದಸ್ಯೆಯಾಗಿದ್ದಾಗಲೇ ಹಲವಾರು ಮಹಿಳಾ ಸಂಘಗಳನ್ನು ಕಟ್ಟಿ ಮಹಿಳೆಯರ ಆರ್ಥಿಕ ಮತ್ತು ಸಾಮಾಜಿಕ ರಕ್ಷಣೆಗೆ ನಿಂತವರು ಕೌಟುಂಬಿಕ ದೌರ್ಜನ್ಯಕ್ಕೆ ಒಳಗಾದವ–ರಿಗೆ ಕಾನೂನು ನೆರವು ಸ್ವ–ಸಹಾಯ ಗುಂಪುಗಳ ಮೂಲಕ ಸ್ವಾವಲಂಬನೆ ಹೆಣ್ಣು ಮಕ್ಕಳಿಗೆ ಹೊಲಿಗೆ, ಕಂಪ್ಯೂಟರ್ ತರಬೇತಿ ಮಾದರಿ ಮಹಿಳೆ ಇವರಾಗಿದ್ದಾರೆ.

ಆಶ್ರಮ ಹುಟ್ಟಿದಾಗಿನಿಂದ ಕಳೆದ 9 ವರ್ಷಗಳಿಂದ ಅನಾಥ ವೃದ್ಧರು, ಬುದ್ಧಿಮಾಂದ್ಯರು, ಮಾನಸಿಕ ಅಸ್ವಸ್ಥರನ್ನು ಸ್ವಂತ ಮಕ್ಕಳಂತೆ ಸಾಕುತ್ತಿದ್ದಾರೆ ಹಲವಾರು ಪ್ರಶಸ್ತಿಗಳನ್ನು ಸ್ವೀಕರಿಸಿ ಹಲವಾರು ಮಹಿಳೆಯರಿಗೂ ಕೂಡ ಸ್ಪೂರ್ತಿದಾಯಕವಾಗಿದ್ದರೆ. 27ನೇ ವಿವಾಹ ವಾರ್ಷಿಕೋತ್ಸವ ಆಚರಿಸುತ್ತಿರುವ ಈ ಸೇವಾಕರ್ತ ದಂಪತಿಗಳು ನಮಗೆ ಹೇಳೋದು ಒಂದೇ: "ಸೇವೆ ಮಾಡಲು ಶ್ರೀಮಂತರಾಗಬೇಕಿಲ್ಲ, ಒಳ್ಳೆಯ ಮನಸ್ಸಿದ್ದರೆ ಸಾಕು. ನಿಮ್ಮ ಮನೆಯಲ್ಲಿ ಹೆಚ್ಚಾದ ಒಂದು ತುತ್ತು ಅನ್ನ, ಒಂದು ಹಳೆಯ ಬಟ್ಟೆ ಯಾರದೋ ಪಾಲಿಗೆ ಹೊಸ ಬದುಕಾಗಬಹುದು"ಎಂದು

ಇಂದು 'ಕಾರುಣ್ಯ ಆಶ್ರಮ' ಎಂಬ ಮರವಾಗಿ ಬೆಳೆದಿರುವುದು 9 ವರ್ಷದ ಹಿಂದೆ ಈ ದಂಪತಿ ಬಿತ್ತಿದ 'ಕರುಣೆಯ ಬೀಜ'ದಿಂದ. ಈ ಸೇವಕರ್ತ ದಂಪತಿಗಳ ದಾಂಪತ್ಯಕ್ಕೆ 50ರ ಸಂಭ್ರಮ ಬರಲಿ, ಅವರ ಸೇವೆ ನೂರಾರು ವರ್ಷ ಮುಂದುವರೆಯಲಿ ಎಂಬುದೇ ನಮ್ಮ ಹಾರೈಕೆ. ಈ ಆದರ್ಶ ದಂಪತಿಗಳ ಸೇವೆಗೆ ಹರೇಟನೂ–ರಿನ ಹಿರೇಮಠ ಕುಟುಂಬದ ಹಿರಿಯರು ಗ್ರಾಮದ ಗ್ರಾಮದೇವತೆಯಾದ ಆದಿಶಕ್ತಿ ಶ್ರೀ ದ್ಯಾವಮ್ಮ ಪ್ರಧಾನ ಅರ್ಚಕರು ಮತ್ತು ಸಿಂಧನೂರಿನ ಕರುಣೆಯ ಕಾರುಣ್ಯ ಆಶ್ರಮದ ಸ್ಥಾಪಕರಾದ ವೇದಮೂರ್ತಿ ಶ್ರೀ ಅಮರಯ್ಯ ಸ್ವಾಮಿಯವರ ಆಶೀರ್ವಾದವೇ ಈ ಸೇವೆಗೆ ಸ್ಪೂರ್ತಿ,, ದಾಸೋಹವೇ ದೇವರ ಪೂಜೆ ಎಂದು ನಂಬಿ ಬದುಕುತ್ತಿರುವ ಶ್ರೀಮತಿ ಸುಜಾತ ಮತ್ತು ಶ್ರೀ ಚನ್ನಬಸಯ್ಯ ಸ್ವಾಮಿ ಹಿರೇಮಠ್ ದಂಪತಿಗಳ 27ನೇ ವಿವಾಹ ವಾರ್ಷಿಕೋತ್ಸವದ ಈ ಶುಭ ಸಂದರ್ಭದಲ್ಲಿ, ಅವರ ದಾಂಪತ್ಯ ಜೀವನ ಇನ್ನಷ್ಟು ವರ್ಷಗಳ ಕಾಲ ಹೀಗೆಯೇ ಸೇವೆಯ ಸುಗಂಧ ಬೀರಲಿ. ' ಕಾರುಣ್ಯ ಆಶ್ರಮ' ನೂರಾರು ಜೀವಗಳಿಗೆ ಬೆಳಕಾಗಲಿ ಎಂದು ಹಾರೈಸೋಣ????

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಕಂಪ್ಯೂಟರ್ ನೆರವಿನ ವಿನ್ಯಾಸ

ಕಂಪ್ಯೂಟರ್ ನೆರವಿನ ವಿನ್ಯಾಸ (Computer-Aided Design - CAD) ಕೋರ್ಸ್ ಕಂಪ್ಯೂಟರ್ ಅಥವಾ ವರ್ಕ್‌ಸ್ಟೇಷನ್ ಸಹಾಯದಿಂದ ವಿನ್ಯಾಸಗಳನ್ನು (Designs) ರಚಿಸುವುದು, ತಿದ್ದುಪಡಿ ಮಾಡುವುದು, ವಿಶ್ಲೇಷಿಸುವುದು ಹಾಗೂ ಉತ್ತಮಗೊಳಿಸುವ ಪ್ರಕ್ರಿಯೆಯನ್ನು ಕಂಪ್ಯೂಟರ್ ನೆರವಿನ ವಿನ್ಯಾಸ (CAD) ಎಂದು ಕರೆಯಲಾಗುತ್ತದೆ. ಈ ಉದ್ದೇಶಕ್ಕಾಗಿ ಬಳಸುವ ವಿವಿಧ ತಂತ್ರಾಂಶಗಳನ್ನು ಅಂಆ ಸಾಫ್ಟ್‌ವೇರ್ ಎಂದು ಕರೆಯುತ್ತಾರೆ. ಅಂಆ ಸಾಫ್ಟ್‌ವೇರ್ ಬಳಕೆಯಿಂದ ವಿನ್ಯಾಸಕರ ಉತ್ಪಾದಕತೆ (Productivity) ಬಹಳಷ್ಟು ಹೆಚ್ಚಾಗಿದೆ. ಇದರಿಂದ ವಿನ್ಯಾಸದ ಗುಣಮಟ್ಟ ಮತ್ತು ಮಾಹಿತಿಯ ವಿನಿಮಯ (Communication) ಕೂಡ ಉತ್ತಮಗೊಂಡಿದೆ. ಉತ್ಪಾದನಾ (Manufacturing) ಕಾರ್ಯಗಳಿಗೆ ಅಗತ್ಯವಿರುವ ದತ್ತಾಂಶ (Database) ಸಹ ಅಂಆ ಸಾಫ್ಟ್‌ವೇರ್ ಮೂಲಕ ಸೃಷ್ಟಿಸಲಾಗುತ್ತದೆ. ಕರಡು ಚಿತ್ರಣ (Drafting) ಮತ್ತು ವಿನ್ಯಾಸ (Designing) ಎರಡನ್ನೂ ಕಂಪ್ಯೂಟರ್ ಸಹಾಯದಿಂದ ಮಾಡುವ ಪ್ರಕ್ರಿಯೆಯನ್ನು ಕಂಪ್ಯೂಟರ್ ನೆರವಿನ ವಿನ್ಯಾಸ ಮತ್ತು ಕರಡು ಚಿತ್ರಣ (Computer-Aided Design and Drafting - CADD) ಎಂದು ಕರೆಯಲಾಗುತ್ತದೆ. ಇದೇ ತಂತ್ರಜ್ಞಾನವನ್ನು ಎಲೆಕ್ಟ್ರಾನಿಕ್ ವ್ಯವಸ್ಥೆಗಳ ವಿನ್ಯಾಸದಲ್ಲಿ ಬಳಸಿದಾಗ ಅದನ್ನು ಎಲೆಕ್ಟ್ರಾನಿಕ್ ವಿನ್ಯಾಸ ಸ್ವಯಂಚಾಲನೆ (Electronic Design Automation - EDA) ಎಂದು ಕರೆಯುತ್ತಾರೆ. ಯಾಂತ್ರಿಕ ವಿನ್ಯಾಸಗಳನ್ನು ರಚಿಸಲು ಬಳಸಿದಾಗ ಅದನ್ನು ಯಾಂತ್ರಿಕ ವಿನ್ಯಾಸ ಸ್ವಯಂಚಾಲನೆ (Mechanical Design Automation - MDA) ಎಂದು ಕರೆಯಲಾಗುತ್ತದೆ. ಇವು ವಿವಿಧ ಎಂಜಿನಿಯರಿಂಗ್ ಕ್ಷೇತ್ರಗಳಲ್ಲಿ ತಾಂತ್ರಿಕ ಚಿತ್ರಣಗಳನ್ನು (Technical Drawings) ಕಂಪ್ಯೂಟರ್ ಸಾಫ್ಟ್‌ವೇರ್ ಸಹಾಯದಿಂದ ಸೃಷ್ಟಿಸುವ ವಿಭಿನ್ನ ವಿಧಾನಗಳಾಗಿವೆ. ಯಾಂತ್ರಿಕ ವಿನ್ಯಾಸಗಳನ್ನು ಅಂಆ ಸಾಫ್ಟ್‌ವೇರ್ ಬಳಸಿ ಸಾಮಾನ್ಯವಾಗಿ ಎರಡು ಮಾದರಿಗಳಲ್ಲಿ ಸಿದ್ಧಪಡಿಸಲಾಗುತ್ತದೆ: ವೆಕ್ಟರ್ ಆಧಾರಿತ ಗ್ರಾಫಿಕ್ಸ್ (Vector-Based Graphics): ಸಾಂಪ್ರದಾಯಿಕ ಕರಡು ಚಿತ್ರಣಗಳಲ್ಲಿ ಬಳಸುವ ವಸ್ತುಗಳನ್ನು ಮತ್ತು ಆಕಾರಗಳನ್ನು ಚಿತ್ರಿಸಲು ಬಳಸಲಾಗುತ್ತದೆ. ರಾಸ್ಟರ್ ಗ್ರಾಫಿಕ್ಸ್ (Raster Graphics): ವಿನ್ಯಾಸಗೊಳಿಸಿದ ವಸ್ತುಗಳ ಒಟ್ಟಾರೆ ರೂಪ ಹಾಗೂ ದೃಶ್ಯವನ್ನು (Appearance) ತೋರಿಸಲು ಬಳಸಲಾಗುತ್ತದೆ. ಆದರೆ ಅಂಆ ಕೇವಲ ಆಕಾರಗಳನ್ನು ಚಿತ್ರಿಸುವುದಕ್ಕೆ ಮಾತ್ರ ಸೀಮಿತವಾಗಿಲ್ಲ. ಕಂಪ್ಯೂಟರ್ ನೆರವಿನ ವಿನ್ಯಾಸದ ಫಲಿತಾಂಶವು ವಸ್ತುಗಳ (Materials), ಉತ್ಪಾದನಾ ಪ್ರಕ್ರಿಯೆಗಳ (Processes), ಆಯಾಮಗಳ (Dimensions), ಸಹಿಷ್ಣುತೆಗಳ (ಖಿಂಟಜಡಿಚಿಟಿಛಿಫ) ಮತ್ತು ಅನ್ವಯಿಕೆ–ನಿರ್ದಿಷ್ಟ (Application-Specific) ಮಾನದಂಡಗಳ ಕುರಿತು ಸಂಪೂರ್ಣ ಮಾಹಿತಿಯನ್ನು ಒದಗಿಸುತ್ತದೆ. ಇದು ಕೈಯಾರೆ ಮಾಡುವ ತಾಂತ್ರಿಕ ಮತ್ತು ಎಂಜಿನಿಯರಿಂಗ್ ಚಿತ್ರಣಗಳಂತೆಯೇ ಎಲ್ಲಾ ಅಗತ್ಯ ಮಾಹಿತಿಯನ್ನು ಒಳಗೊಂಡಿರುತ್ತದೆ.

## ಬಿ.ಇ.ಓ. ಬಸಲಿಂಗಪ್ಪ ಅವರಿಗೆ ಸ್ಕೌಟ್ಸ್ ಮತ್ತು ಗೈಡ್ಸ್ ವಾರ್ಷಿಕ ಕಾರ್ಯಕ್ರಮಗಳ ಯೋಜನಾ ಪುಸ್ತಕ ಸಲ್ಲಿಕೆ

❑ ನೈಜ್ಯ ದೆಸೆ ನ್ಯೂಸ್

ಸಿಂಧನೂರು : ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ನ ಕನಾಟಕ, 2026–27 ನೇ ಸಾಲಿನ ವಾರ್ಷಿಕ ಕಾರ್ಯಕ್ರಮಗಳ ಯೋಜನಾ ಪುಸ್ತಕವನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಬಸಲಿಂಗಪ್ಪ ಅವರಿಗೆ ಸಿಂಧನೂರು



ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಹಾಗೂ ಜಿಲ್ಲಾ ಮುಕ್ತದಳದ ಸಹಾಯಕ ಜಿಲ್ಲಾ ಆಯುಕ್ತರಾದ ಬೀರಪ್ಪ ಶಂಭೋಜಿ ನೀಡಿದರು .

ಸರಕಾರದ ಆದೇಶದ ಪ್ರಕಾರ ಪರತಿಯೊಂದು ಸರಕಾರಿ, ಅನುದಾನಿತ, ಅನುದಾನ ರಹಿತ ಶಾಲೆಗಳಲ್ಲಿ ಒಂದು ಸ್ಕೌಟ್ಸ್ ಗೈಡ್ಸ್ ಘಟಕವನ್ನು ಕಡ್ಡಾಯವಾಗಿ ಪ್ರಾರಂಭಿಸುವಂತೆ ಸೂಚಿಸಬೇಕು ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳಿಗೆ ಹೆಚ್ಚಿನ ಸಹಕಾರ ಮಾರ್ಗದರ್ಶನ ಮಾಡಬೇಕೆಂದು ಮನವಿ ಮಾಡಿಕೊಳ್ಳಲಾಯಿತು. ಈ ಸಂದರ್ಭದಲ್ಲಿ ದೈಹಿಕ ಶಿಕ್ಷಣ ಪರಿವೀಕ್ಷಕರಾದ ಸೋಮಲಿಂಗಪ್ಪ, ಸ್ಕೌಟ್ ವಿಭಾಗದ ಸಹಾಯಕ ಜಿಲ್ಲಾ ಆಯುಕ್ತರಾದ ರಾಮದಾಸ ನಾಯಕ, ಜಿಲ್ಲಾ–ಎಸ್.ಜಿ.ವಿ. ಅಂಬಣ್ಣ ನಾಯಕ, ಸಿ.ಆರ್.ಪಿ. ಜಗದೀಶ, ಸ್ಕೌಟ್ ಮಾಸ್ಟರ್ ಸಿದ್ದಪ್ಪ ಬಸರಕೋಡ ಉಪಸ್ಥಿತರಿದ್ದರು.

## ಬಿಜೆಪಿ ಮುಖಂಡ ಕೆ.ಕರಿಯಪ್ಪ ನೇತ್ರತ್ವದಲ್ಲಿ ಕ್ಷೇತ್ರದ ಜನತೆಗೆ ಎಸ್ಐಆರ್ ಕುರಿತು ಸಮಗ್ರ ಮಾಹಿತಿ..

❑ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಬಿಜೆಪಿ ಮುಖಂಡ ಕೆ.ಕರಿಯಪ್ಪ ಅವರ ನೇತೃತ್ವದಲ್ಲಿ ತಾಲೂಕಿನ ಸಿಎಸ್ಎಫ್ ಕ್ಯಾಂಪಿನಲ್ಲಿ ಕೇಂದ್ರ ಬಿಜೆಪಿ ಸರ್ಕಾರ ಮಹತ್ವಾಕಾಂಕ್ಷೆಯ ಎಸ್ಐಆರ್ ಕುರಿತು ಕ್ಯಾಂಪಿನ ಸಾರ್ವಜನಿಕರೊಂದಿಗೆ ವಿಶೇಷ ಸಭೆ ನಡೆಸಿ ಎಸ್ಐಆರ್ ಬಗ್ಗೆ ಇರುವ ಅನುಮಾನ ಬಗ್ಗೆ ಹಾಗೂ ಲಾಭ ನಷ್ಟಗಳ ಕುರಿತು ಜನರಿಗೆ ಸಮಗ್ರವಾಗಿ ಮಾಹಿತಿ ನೀಡಲಾಯಿತು.

ಕಳೆದ ನಾಲ್ಕೈದು ದಿನಗಳಿಂದ ಬಿಜೆಪಿ ಮುಖಂಡ ಕೆ.ಕರಿಯಪ್ಪ ಅವರು, ಈಗಾಗಲೇ ಸಿಂಧನೂರು ಕ್ಷೇತ್ರದ ದಿದ್ದಿಗಿ, ರಾಮತ್ನಾಳ್, ಯಾಪಲಪರ್ವಿ, ದುಮತಿ, ಯದ್ದಲದೊಡ್ಡಿ, ಬಾದರ್ಲಿ, ಗಿಣಿವಾರ, ಹರಟೇನೂರು, ಸೇ–ರಿದಂತೆ ಅನೇಕ ಹಳ್ಳಿಗಳಿಗೆ, ಹಾಗೂ ಕ್ಯಾಂಪ್



ಗಳಿಗೆ, ತೆರಳಿ ಎಸ್ಐಆರ್ ಬಗ್ಗೆ ಜನರಿಗೆ ಇರುವ ಗೊಂದಲವನ್ನು ತಿಳಿಪಡಿಸುತ್ತಾ, ಎಸ್ಐಆರ್ ಈ ದೇಶದ ರಕ್ಷಣೆಗಾಗಿ, ಈ ದೇಶದ ಪ್ರತಿಯೊಬ್ಬ ನಾಗರಿಕನಿಗೂ ವೋಟು ಹಾಕುವ ಹಕ್ಕಿದೆ. ಅದನ್ನು ಯಾರು ದುರುಪಯೋಗ ಮಾಡಿಕೊಳ್ಳಬಾರದು ಎಂಬ ಕೇಂದ್ರ ಸರ್ಕಾರದ ನಿಲುವಾಗಿದೆ. ಈ ನಿಟ್ಟಿನಲ್ಲಿ ಎಸ್ಐಆರ್ ಪ್ರಕ್ರಿಯೆಗೆ ಪ್ರತಿಯೊಬ್ಬರು ಸಹಕರಿಸಬೇಕು ಎಂದರು.

ಈ ಸಂಧರ್ಭದಲ್ಲಿ: ಗ್ರಾಮೀಣ ಮಂಡಲ ಅಧ್ಯಕ್ಷ ವೆಂಕೋಬ ನಾಯಕ ರಾಮತ್ನಾಳ್, ಮಾಜಿ ಜಿಲ್ಲಾ ಪಂಚಾಯತಿ ಅಧ್ಯಕ್ಷ ಪರಮೇಶಪ್ಪ, ಸಿದ್ದಲಿಂಗಯ್ಯಸ್ವಾಮಿ ವಕೀಲರು, ಬಿಎಲ್.ಎ.1 ಪ್ರಧಾನ ಕಾರ್ಯದರ್ಶಿ ಯಮನಗೌಡ, ಒಬಿಸಿ ಅಧ್ಯಕ್ಷ ಸೋಮನಾಥ ಕಲ್ಲೂರು, ಯುವ ಮೋರ್ಚಾ ಅಧ್ಯಕ್ಷ ಮುತ್ತು ಬರ್ಸಿ, ಎಸ್.ಟಿ.ಮೋರ್ಚಾ ಅಧ್ಯಕ್ಷ ಬಸವರಾಜ ನಾಯಕ್, ವಿರುಪಾಕ್ಷಿಗೌಡ, ವೀರೇಶ ಗೋಮರ್ಸಿ, ಸುನಿಲ್ ನಾಯಕ, ಅನಿಲ್, ಟಿ.ಭೀಮಣ್ಣ ಯದ್ದಲದೊಡ್ಡಿ, ಲಾರೆನ್ಸ್, ಬಾಲರಾಜ, ಎಸ್ಸಿ ಮೋರ್ಚಾ ಅಧ್ಯಕ್ಷ ಶಾಂತಕುಮಾರ, ಶರಣಬಸವ, ಅಯ್ಯಪ್ಪ, ಗೋವಿಂದಪ್ಪ, ಚನ್ನಬಸವ ಹಾಗೂ ವೆಂಕೋಬ, ಸಂತೋಷ, ಮಂಜುನಾಥ, ರವಿಕುಮಾರ, ಭದ್ರಿನಾಥ, ಕ್ಯಾಂಪಿನ ಮುಖಂಡರು, ಪದಾಧಿಕಾರಿಗಳು ಹಾಗೂ ಮೋರ್ಚಾಗಳ ಅಧ್ಯಕ್ಷರು, ಬಿಜೆಪಿ ಕಾರ್ಯಕರ್ತರು, ಸೇ–ರಿದಂತೆ ಪ್ರಮುಖರು ಉಪಸ್ಥಿತರಿದ್ದರು.

## ಬೈಲ್ ಮರ್ಚಡ್ ಗ್ರಾಮದಲ್ಲಿ ಸಮುದಾಯ ಭವನ ಉದ್ಘಾಟಿಸಿದ ಶಾಸಕ ಬಸವನಗೌಡ ದದ್ದಲ್



❑ ನೈಜ್ಯ ದೆಸೆ ನ್ಯೂಸ್

ಮಾನ್ವಿ: ತಾಲೂಕಿನ ಬೈಲ್ ಮರ್ಚಡ್ ಗ್ರಾಮದಲ್ಲಿ ಲೋಕೋಪಯೋಗಿ ಇಲಾಖೆ ವತಿಯಿಂದ 2024–25 ನೇ ಸಾಲಿನ ಕೆ.ಕೆ.ಆರ್.ಡಿ.ಬಿ. ಮೈಕ್ರೋಯೋಜನೆಯಡಿಯಲ್ಲಿ ಅಂದಾಜು 23 ಲಕ್ಷ ವೆಚ್ಚದಲ್ಲಿ ನಿರ್ಮಿಸಲಾದ ಸಮುದಾಯ ಭವನವನ್ನು ರಾಯಚೂರು ಗ್ರಾಮೀಣ ಕ್ಷೇತ್ರದ ಶಾಸಕರು ಹಾಗೂ ಕರ್ನಾಟಕ ಪರಿಶಿಷ್ಠ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಬಸವನಗೌಡ ದದ್ದಲ್ ಉದ್ಘಾಟಿಸಿ ಮಾತನಾಡಿ ಗ್ರಾಮದ ಎಲ್ಲಾ ಸಮುದಾಯದವರು ಸಮುದಾಯ ಭವನವನ್ನು ಉಪಯೋಗಿಸಿಕೊಳ್ಳಿ ಹಾಗೂ ಉತ್ತಮವಾಗಿ ನಿರ್ವಾಹಣೆ ಮಾಡುವ ಮೂಲಕ ಹೆಚ್ಚು ಜನರಿಗೆ ಉಪಯೋಗವಾಗುವಂತೆ ನೋಡಿಕೊಳ್ಳಿ ಹಾಗೂ ಗ್ರಾಮದ ಮಕ್ಕಳಿಗೆ ಅನುಕೂಲವಾಗವಂತೆ ಗ್ರಾಮದಲ್ಲಿನ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಎರಡು ಕೋಠಡಿಗಳನ್ನು ಕೂಡ ನಿರ್ಮಾಣಮಾಡಲಾಗಿದೆ ಎಂದು ತಿಳಿಸಿದರು.

ತಾಲೂಕು ಪಂಚಾಯಿತಿ ಇ.ಓ. ಖಾಲೀದ್ ಅಹಮ್ಮದ್, ಗ್ರಾಮ ಪಂಚಾಯಿತಿ ಪಿ.ಡಿ.ಓ.ಗಳಾದ ಚೌಡಯ್ಯ, ಅಕ್ತರ್ ಪಾಷ, ಕ್ಷೇತ್ರ ಶಿಕ್ಷಣಾಧಿಕಾರಿ ಚಂದ್ರಶೇಖರ ಡಿ. ಜೆಸ್ಕಾಂ.ಎಇಇ. ವೈಜನಾಥಸ್ವಾಮಿ ಗ್ರಾಮದ ಮುಖಂಡರಾದ ವಿಶ್ವನಾಥರೆಡ್ಡಿ,ಹುಲುಗಯ್ಯಸಾಹುಕರ್,ನಾಗೇಂದ್ರಪ್ಪ,ತಿಕ್ಕಯ್ಯಸ್ವಾಮಿ, ಮಲ್ಲಿಕಾರ್ಜುನಗೌಡ,ಶಿವಪ್ಪನಾಯಕ, ಮೌನೇಶನಾಯಕ ಸೇರಿದಂತೆ ಇನ್ನಿತರರು ಇದ್ದರು.

23–ಮಾನ್ವಿ–3: ಮಾನ್ವಿ: ತಾಲೂಕಿನ ಬೈಲ್ ಮರ್ಚಡ್ ಗ್ರಾಮದಲ್ಲಿ ಕೆ.ಕೆ.ಆರ್.ಡಿ.ಬಿ. ಮೈಕ್ರೋಯೋಜನೆಯಡಿಯಲ್ಲಿ ನಿರ್ಮಿಸಲಾದ ಸಮುದಾಯ ಭವನವನ್ನು ಶಾಸಕ ಬಸವನಗೌಡ ದದ್ದಲ್ ಉದ್ಘಾಟಿಸಿದರು.

## ಗುಂಡಕರ್ಜಗಿ ಗ್ರಾಮದಲ್ಲಿ ಕುಡಿಯುವ ನೀರಿನ ತೀವ್ರ ಸಮಸ್ಯೆ: ಧರಣಿ ಸತ್ಯಾಗ್ರಹದ ಎಚ್ಚರಿಕೆ

❑ ನೈಜ್ಯ ದೆಸೆ ನ್ಯೂಸ್

ಮುದ್ದೇಬಿಹಾಳ: ತಾಲೂಕಿನ ರೂಡಗಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗುಂಡಕರ್ಜಗಿ ಗ್ರಾಮದಲ್ಲಿ ತೀವ್ರ ಕುಡಿಯುವ ನೀರಿನ ಸಮಸ್ಯೆ ಎದುರಾಗಿದ್ದು, ಸಮಸ್ಯೆ ಶೀಘ್ರ ಪರಿಹರಿಸದಿದ್ದಲ್ಲಿ ಗ್ರಾಮ ಪಂಚಾಯಿತಿ ಕಚೇರಿ ಎದುರು ಖಾಲಿ ಕೊಡಗಳೊಂದಿಗೆ ಧರಣಿ ಸತ್ಯಾಗ್ರಹ ನಡೆಸುವುದಾಗಿ ಗ್ರಾಮಸ್ಥರು ಎಚ್ಚರಿಕೆ ನೀಡಿದ್ದಾರೆ.

ಈ ಕುರಿತು ಗ್ರಾಮಸ್ಥರು ಮಂಗಳವಾರ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗೆ ಮನವಿ ಸಲ್ಲಿಸಿ, ಕಳೆದ ಹಲವು ದಿನಗಳಿಂದ ಗ್ರಾಮದಲ್ಲಿ ಕುಡಿಯುವ ನೀರಿನ ಅಭಾವ ತೀವ್ರಗೊಂಡಿದ್ದು, ಜನರು ಸಂಕಷ್ಟ ಅನುಭವಿಸುತ್ತಿದ್ದಾರೆ ಎಂದು ತಿಳಿಸಿದ್ದಾರೆ. ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಈ ಬಗ್ಗೆ ಹಲವು ಬಾರಿ ಮೌಖಿಕ ಹಾಗೂ ಲಿಖಿತ ಮನವಿಗಳನ್ನು ಸಲ್ಲಿಸಿದ್ದರೂ ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲ ಎಂದು ಗ್ರಾಮಸ್ಥರು ದೂರಿದ್ದಾರೆ.



ಅಧಿಕಾರಿಗಳು ಇಂದು–ನಾಳೆ ಎಂದು ಕಾಲಹರಣ ಮಾಡುತ್ತಿದ್ದು, ಸಮಸ್ಯೆ ಪರಿಹಾರಕ್ಕೆ ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ ಎಂದು ಆರೋಪಿಸಿದ್ದಾರೆ. ಈ ವರ್ಷ ಸಮರ್ಪಕ ಮಳೆಯಾಗದ ಹಿನ್ನೆಲೆಯಲ್ಲಿ ಗ್ರಾಮದಲ್ಲಿ ನೀರಿನ ಕೊರತೆ ಮತ್ತಷ್ಟು ಉಲ್ಬಣಗೊಂಡಿದೆ. ಗ್ರಾಮದಲ್ಲಿನ ಬಹುತೇಕ ನಿವಾಸಿಗಳು ಕೂಲಿ ಕಾರ್ಮಿಕರಾಗಿದ್ದು, ಕುಡಿಯುವ ನೀರಿಗಾಗಿ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ಮುಂದಿನ ಎರಡು ದಿನಗಳೊಳಗೆ ಗ್ರಾಮಕ್ಕೆ ಸಮರ್ಪಕ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಿ ಸಮಸ್ಯೆ ಬಗೆಹರಿಸಬೇಕು. ಇಲ್ಲವಾದಲ್ಲಿ ಗ್ರಾಮ ಪಂಚಾಯಿತಿ ಕಚೇರಿ ಎದುರು ಖಾಲಿ ಕೊಡಗಳೊಂದಿಗೆ ಧರಣಿ ಸತ್ಯಾಗ್ರಹ ನಡೆಸಲಾಗುವುದು ಎಂದು ಗ್ರಾಮಸ್ಥರು ಎಚ್ಚರಿಕೆ ನೀಡಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಗ್ರಾಮಕ್ಕೆ ಭೇಟಿ ನೀಡಿ ಪರಿಸ್ಥಿತಿಯನ್ನು ಪರಿಶೀಲಿಸಿ, ಕುಡಿಯುವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಮನವಿ ಸಲ್ಲಿಸುವ ಸಂದರ್ಭದಲ್ಲಿ ಬಸವರಾಜ ಚಲವಾದಿ, ಆನಂದ ಮುದೂರ, ಪರಶುರಾಮ ಬಸರಕೋಡ, ಶ್ರೀಧರ ಮುದೂರ, ಮುತ್ತು ಅಮರಗೋಳ, ಯಲ್ಲಪ್ಪ ಚಲವಾದಿ, ಸಹನಾ ಚಪ್ಪರಬಂದ, ರಹಮಾನ ಚಪ್ಪರಬಂದ, ಅಲಿಮಾ ಚಪ್ಪರಬಂದ, ನೀಲಮ್ಮ ಅರಳಿಚಂಡಿ, ಸಾವಿತ್ರಿ ಅರಳಿಚಂಡಿ, ಜಯತೂನಬಿ ಚಪ್ಪರಬಂದ, ಖಾಜಾಬಿ ಚಪ್ಪರಬಂದ, ಬಸಲಿಂಗವ್ವ ಬಿರಾದಾರ, ನಾಗವ್ವ ಪೂಜಾರಿ, ಶ್ರೀದೇವಿ ಅರಳಿಚಂಡಿ, ರಂಗಪ್ಪ ಸುತಗುಂಡರ ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.

## ಅಬಕಾರಿ ಇಲಾಖೆಯ ವತಿಯಿಂದ ಮೊಹರಂ ಹಬ್ಬದ ಶಾಂತಿ ಸಭೆ

### ಮೊಹರಂ ಹಬ್ಬದ ವೇಳೆ ಅಕ್ರಮ ಮದ್ಯ ಮಾರಾಟಕ್ಕೆ ಅವಕಾಶ ಇಲ್ಲ : ಅಬಕಾರಿ ಇನ್ಸ್ಪೆಕ್ಟರ್ ಲಕ್ಷ್ಮಿದೇವಿ ಎಚ್ಚರಿಕೆ



❑ ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು : ಜೂ 24 – ಮೊಹರಂ ಹಬ್ಬದ ಪ್ರಯುಕ್ತ ಸಾರ್ವಜನಿಕ ಶಾಂತಿ, ಸುವ್ಯವಸ್ಥೆ ಹಾಗೂ ಕಾನೂನು ಪಾಲನೆಗೆ ಆದ್ಯತೆ ನೀಡುವ ನಿಟ್ಟಿನಲ್ಲಿ ಲಿಂಗಸಗೂರು ಅಬಕಾರಿ ವಲಯದ ಕಚೇರಿಯಲ್ಲಿ ಮಸ್ಕಿ, ಹಟ್ಟಿ ಹಾಗೂ ಮುದಗಲ್ ಪಟ್ಟಣಗಳ ಎಲ್ಲಾ ಮದ್ಯ ಮಾರಾಟ ಸನ್ನದುದಾರರ ಸಭೆಯನ್ನು ಆಯೋಜಿಸಲಾಗಿತ್ತು. ಸಭೆಯಲ್ಲಿ ಮಾತನಾಡಿದ ಅಬಕಾರಿ ನಿರೀಕ್ಷಕಿ ಲಕ್ಷ್ಮಿದೇವಿ,

ಮೊಹರಂ ಹಬ್ಬದ ಸಂದರ್ಭದಲ್ಲಿ ಯಾವುದೇ ರೀತಿಯ ಅಕ್ರಮ ಮದ್ಯ ಸಾಗಾಟ, ಸಂಗ್ರಹಣೆ ಅಥವಾ ಮಾರಾಟ ನಡೆಯದಂತೆ ಸನ್ನದುದಾರರು ಕಟ್ಟುನಿಟ್ಟಿನ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸೂಚಿಸಿದರು. ಹಬ್ಬದ ಸಂದರ್ಭದಲ್ಲಿ ಕೆಲವು ಗ್ರಾಮೀಣ ಪ್ರದೇಶಗಳಲ್ಲಿ ಅಕ್ರಮವಾಗಿ ಮದ್ಯ ಸರಬರಾಜು ಮಾಡುವ ಪ್ರಯತ್ನಗಳು ಕಂಡುಬರುವ ಸಾಧ್ಯತೆ ಇರುವುದರಿಂದ, ಅಂತಹ ಚಟುವಟಿಕೆಗಳಿಗೆ ಅವಕಾಶ ನೀಡಬಾರದು.

ಅಬಕಾರಿ ಇಲಾಖೆಯ ನಿಯಮಗಳನ್ನು ಉಲ್ಲಂಘಿಸಿ ಅಕ್ರಮ ಮದ್ಯ ಮಾರಾಟ ಅಥವಾ ಸಾಗಾಟ ನಡೆಸಿರುವುದು ಕಂಡುಬಂದರೆ ಸಂಬಂಧಪಟ್ಟವರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಅವರು ಎಚ್ಚರಿಕೆ ನೀಡಿದರು. ಮೊಹರಂ ಹಬ್ಬದ ಅಂಗವಾಗಿ ಜಿಲ್ಲಾಧಿಕಾರಿಗಳು (ಡಿಸಿ) ಹೊರಡಿಸಲಿರುವ ಆದೇಶಗಳನ್ನು ಎಲ್ಲ ಸನ್ನದುದಾರರು ಕಡ್ಡಾಯವಾಗಿ ಪಾಲಿಸಬೇಕು.

ಇಲಾಖೆಯ ಸೂಚನೆಗಳನ್ನು ನಿರ್ಲಕ್ಷಿಸಿದರೆ ಪರವಾನಗಿ ನಿಯಮಗಳ ಪ್ರಕಾರ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ಹಬ್ಬದ ಸಂದರ್ಭದಲ್ಲಿ ಸಾರ್ವಜನಿಕರಲ್ಲಿ ಶಾಂತಿ ಮತ್ತು ಸೌಹಾರ್ದತೆ ಕಾಪಾಡಲು ಇಲಾಖೆಯೊಂದಿಗೆ ಸಹಕರಿಸುವಂತೆ ಸನ್ನದುದಾರರಿಗೆ ಅವರು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಅಬಕಾರಿ ಉಪನಿ–ರೀಕ್ಷಕರಾದ ಬಸವರಾಜ, ಶರಣಪ್ಪ ಹಾಗೂ ವಿವಿಧ ಮದ್ಯ ಮಾರಾಟ ಮಳಿಗೆಗಳ ಸನ್ನದುದಾರರು ಸೇರಿದಂತೆ ಇದ್ದರು.

## ಜುಲೈ 02ರಂದು ಜಪ್ತಿ ಆಹಾರ ಧಾನ್ಯಗಳ ಬಹಿರಂಗ ಹರಾಜು – ಸಿಂಧನೂರು

❑ ನೈಜ್ಯ ದೆಸೆ ನ್ಯೂಸ್

ರಾಯಚೂರು ಜೂನ್ 23 (ಕರ್ನಾಟಕ ವಾರ್ತೆ): ಜಿಲ್ಲೆಯ ಸಿಂಧನೂರಿನ ಆಹಾರ ಇಲಾಖೆಯಿಂದ ಸಗಟು ಗೋದಾಮುಗಳಲ್ಲಿ ವಿವಿಧ ಪ್ರಕರಣಗಳಲ್ಲಿ ಜಪ್ತಿ ಮಾಡಲಾದ 47.29 ಕ್ವಿಂಟಾಲ್ ಅಕ್ಕಿ ಹಾಗೂ 217.78 ಕ್ವಿಂಟಾಲ್ ಜೋಳದ ಆಹಾರ ಧಾನ್ಯಗಳನ್ನು ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲು ಜುಲೈ 02ರ ಬೆಳಿಗ್ಗೆ 12ಗಂಟೆಗೆ ಸಿಂಧನೂರಿನ ಕೆ.ಎಫ್.ಸಿ.ಎಸ್.ಸಿ ಸಗಟು ಗೋದಾಮುನಲ್ಲಿ ಬಹಿರಂಗ ಹರಾಜು ಹಮ್ಮಿಕೊಳ್ಳಲಾಗಿದ್ದು, ಆಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬಹುದಾಗಿದೆ.

ಬಹಿರಂಗ ಹರಾಜು ಷರತ್ತುಗಳು: ಹರಾಜಿನಲ್ಲಿ ಭಾಗವಹಿಸುವ ಬಿಡ್ಡುದಾರರು ಎಪಿಎಂಸಿ ಪರವಾನಿಗೆದಾರರು ಅಥವಾ ಪರವಾನಿಗೆ ಪಡೆದ ಸಗಟು ಅಥವಾ ಚಿಲ್ಲರೆ ವ್ಯಾಪಾರಿಗಳು, ಕಮಿಷನ್ ಏಜೆಂಟರ್, ಅಕ್ಕಿ ಗಿರಣಿ ಮಾಲೀಕರು ಹಾಗೂ ದೊಡ್ಡ ಪ್ರಮಾಣದಾರ ಬಳಕೆದಾರ ಸಂಸ್ಥೆಗಳು ಆಗಿರಬೇಕು. ಹರಾಜಿನಲ್ಲಿ ಭಾಗವಹಿಸುವ ಬಿಡ್ಡುದಾರರು ಬಹಿರಂಗ ಹರಾಜು ದಿನ




ಪೂರ್ವಾಹ್ನ 11.30ಗಂಟೆಯೊಳಗಾಗಿ ಹರಾಜು ಸ್ಥಳದಲ್ಲಿ ಹಾಜರಾಗಿ ಹೆಸರನ್ನು ನೋಂದಾಯಿಸಿಕೊಳ್ಳುವುದು, ಹಾಗೂ 20,000 ರೂ.ಗಳನ್ನು (ಇಪತ್ತು ಸಾವಿರ ರೂಗಳ) ಇ.ಎಂ.ಡಿ ಮೊತ್ತವನ್ನು ಮುಂಗಡವಾಗಿ ಪಾವತಿಸಬೇಕು.

ಇ.ಎಂ.ಡಿ ಮೊತ್ತವನ್ನು ಜಿಲ್ಲಾಧಿಕಾ–ರಿಗಳು ರಾಯಚೂರು ಅವರ ಹೆಸರಿನಲ್ಲಿ ಡಿಡಿ ಮೂಲಕ ಪಾವತಿಸತಕ್ಕದ್ದು. ಹರಾಜಿನಲ್ಲಿ ಭಾಗವಹಿಸುವ ಬಿಡ್ಡುದಾರರು ಎರಡು ಪಾಸ್ ಪೋರ್ಟ್ ಸೈಜ್ ಭಾವಚಿತ್ರ, ಪರವಾನಿಗೆ ತಮ್ಮ ವ್ಯಾಪಾರಿ ನೋಂದಣಿ ಪತ್ರ ಅಥವಾ ಸಂಸ್ಥೆ ನೋಂದಣಿ ಪತ್ರ, ಆಧಾರ್ ಕಾರ್ಡಿನ ಪ್ರತಿಯನ್ನು ಹಾಜರುಪಡಿಸಿ ಹರಾಜಿನಲ್ಲಿ ಭಾಗವಹಿಸುವುದು.

ಹರಾಜು ಮುಗಿದ ನಂತರ ಠೇವಣಿ ಮೊತ್ತವನ್ನು ಗರಿಷ್ಠ ಹಾಗೂ ಎರಡನೇ ಗರಿಷ್ಠ ಬಿಡ್ಡುದಾರರನ್ನು ಹೊರತುಪಡಿಸಿ ಉಳಿದ ಬಿಡ್ಡುದಾರ–ರಿಗೆ ಸ್ಥಳದಲ್ಲಿಯೇ ಹಿಂದಿರುಗಿಸಲಾಗುವುದು. ಗ–ರಿಷ್ಠ ಬಿಡ್ಡುದಾರರು ನಿಗದಿತ ಅವದಿಯೊಳಗೆ ಪೂರ್ಣ ಹಣವನ್ನು ಪಾವತಿಸಲು ವಿಫಲವಾದಲ್ಲಿ ಠೇವಣಿ ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು ನಂತರ ಎರಡನೇ ಬಿಡ್ಡುದಾರ–ರಿಗೆ ಅವಕಾಶ ಮಾಡಿಕೊಡಲಾಗುವುದು ಇವ–ರಿಗೆ ಸಹ ಇದೇ ನಿಯಮ ಅನ್ವಯವಾಗುತ್ತದೆ.

ಅಗತ್ಯ ವಸ್ತುಗಳ ಕಾಯ್ದೆಯಡಿಯಲ್ಲಿ ಪ್ರಕರಣಕ್ಕೆ ಒಳಗಾಗಿರುವ ವ್ಯಕ್ತಿ, ಸಂಸ್ಥೆಗಳು, ವ್ಯಾಪಾರಿಗಳು, ಸಾರ್ವಜನಿಕ ವಿತರಣಾ ಪದ್ದತಿ ವ್ಯವಸ್ಥೆಯಡಿಯಲ್ಲಿ ಕೆಲಸ ನಿರ್ವಹಿಸುತ್ತಿರುವವರು ಹರಾಜಿನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ. ಜಪ್ತಿ ಮಾಡಲಾದ ಆಹಾರ ಧಾನ್ಯಗಳನ್ನು ಎಲ್ಲಿದೆಯೋ ಅಲ್ಲಿ ಹಾಗೂ ಹೇಗಿವೆಯೋ ಹಾಗೆ ಷರತ್ತಿನಡಿ ಹರಾಜು ಮಾಡಲಾಗುತ್ತಿರುವುದ–ರಿಂದ ಹರಾಜಿನಲ್ಲಿ ಭಾಗವಹಿಸುವವರು ಅದಕ್ಕೂ ಮುನ್ನ ತಾಲ್ಲೂಕಿನ ಸಗಟು ಗೋದಾಮುಗಳಿಗೆ ಪೂರ್ವಾಹ್ನ 11ಗಂಟೆಗೆಯೊಳಗೆ ಭೇಟಿ ನೀಡಿ ಆಹಾರ ಧಾನ್ಯಗಳ ಗುಣಮಟ್ಟವನ್ನು ಪರಿಶೀಲನೆ ಮಾಡತಕ್ಕದ್ದು.

ಬಹಿರಂಗ ಹರಾಜಿನಲ್ಲಿ ಬರುವ ಸ್ಪರ್ಧಾತ್ಮಕ ದರಗಳನ್ನು ಒಪ್ಪುವ ಅಥವಾ ತಿರಸ್ಕರಿಸುವ ಅಥವಾ ಈ ಹರಾಜವನ್ನು ರದ್ದುಪಡಿಸುವ ಅಧಿಕಾರವನ್ನು ಕಾಯ್ದಿರಿಸಲಾಗಿದೆ. ಆಯಾ ತಾಲ್ಲೂಕಿನ ತಹಶೀಲ್ದಾರರು, ಆಹಾರ ಸಿಬ್ಬಂದಿಯವರು ಮತ್ತು ಗೋದಾಮು ವ್ಯವಸ್ಥಾಪಕರು, ಕೆ.ಎಫ್.ಸಿ.ಎಸ್.ಸಿ ರವರ ಸಮಕ್ಷಮದಲ್ಲಿ ಬಹಿರಂಗ ಹರಾಜನ್ನು ಮಾಡಲಾಗುವುದು. ಬಿಡ್‌ನಲ್ಲಿ ನಮೂದಾಗುವ ದರಗಳನ್ನು ಜಿಲ್ಲಾಧಿಕಾ–ರಿಗಳು ಅನುಮೋದಿಸಿದ ನಂತರ ಬಿಡ್‌ನ ಒಟ್ಟು ಮೌಲ್ಯವನ್ನು ಸರ್ಕಾರದ ಲೆಕ್ಕ ಶಿರ್ಷಿಕೆಗೆ ನಿಗದಿತ ದಿನಾಂಕದೊಳಗಾಗಿ ಜಮಾ ಮಾಡಿ ಚಲನದ ಹರಾಜುಪಡಿಸಿದ ನಂತರ ಹರಾಜಾದ ಪದಾರ್ಥ ಎತ್ತುವಳಿಗೆ ಅವಕಾಶ ನೀಡಲಾಗುವುದು. ಎಪಿಎಂಸಿ ಸೆಸ್ ಮತ್ತು ಇತರೆ ಯಾವುದಾದರೂ ಶುಲ್ಕವನ್ನು ಸರ್ಕಾರಕ್ಕೆ ಕಟ್ಟಬೇಕಾದಲ್ಲಿ ಹರಾಜಿನಲ್ಲಿ ಆಯ್ಕೆಯಾದ ಬಿಡ್‌ದಾರರ ಪಾವತಿಸತಕ್ಕದ್ದು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101